# ಕನ್ನಡ ಎಂ.ಎ.

## ಮೊದಲ ಚತುರ್ಮಾಸ

## (ಸಿ.ಬಿ.ಸಿ.ಎಸ್. ಪಠ್ಯಕ್ರಮ)

# ಆಧುನಿಕ ಕನ್ನಡ ಕಾವ್ಯ

ಪತ್ರಿಕೆ–೧

## MKAN.HC: 1.1

ಬ್ಲಾಕ್:೧–೪



ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ, ಮುಕ್ತಗಂಗೋತ್ರಿ, ಮೈಸೂರು–೫೭೦೦೦೬

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ
ಮುಕ್ತಗಂಗೋತ್ರಿ, ಮೈಸೂರು–೦೬

**ಕನ್ನಡ ಎಂ. ಎ.**
**ಮೊದಲ ಚತುರ್ಮಾಸ**
(ಸಿ.ಬಿ.ಸಿ.ಎಸ್. ಪಠ್ಯಕ್ರಮ)
**ಆಧುನಿಕ ಕನ್ನಡ ಕಾವ್ಯ**
**MKAN.HC:1.1**

## ಸಿಬಿಸಿಎಸ್ ಸೆಮಿಸ್ಟರ್ ಪದ್ಧತಿ

# ಪತ್ರಿಕೆ–೧: ಆಧುನಿಕ ಕನ್ನಡ ಕಾವ್ಯ

## ಬ್ಲಾಕ್–೧ ಕೋಗಿಲೆ ಮತ್ತು ಸೋವಿಯಟ್ ರಷ್ಯಾ : ಕುವೆಂಪು


| | | ಪುಟ ಸಂಖ್ಯೆ |
|---|---|---|
| ಘಟಕ – ೧ | ಕವಿ ಕಾವ್ಯ ಪ್ರೇರಣೆ ಮತ್ತು ಪ್ರಭಾವ | ೧–೧೯ |
| ಘಟಕ – ೨ | ಕುವೆಂಪು ಮತ್ತು ವೈಚಾರಿಕತೆ: ವೈಚಾರಿಕ ಕವನಗಳ ವಿಶ್ಲೇಷಣೆ | ೨೦–೩೪ |
| ಘಟಕ – ೩ | ಕುವೆಂಪು ಮತ್ತು ದೇಶೀಯತೆ: ನಾಡುನುಡಿ ಕುರಿತ ಕವನಗಳ ವಿಶ್ಲೇಷಣೆ | ೩೫– ೪೮ |
| ಘಟಕ – ೪ | ವಸ್ತು ವೈವಿಧ್ಯತೆ: ಕವನಗಳ ವಿಶ್ಲೇಷಣೆ ಮತ್ತು ಕೃತಿ ವಿಮರ್ಶೆ | ೪೯–೬೬ |


## ಬ್ಲಾಕ್–೨ ಸಖೀಗೀತ


| | | ಪುಟ ಸಂಖ್ಯೆ |
|---|---|---|
| ಘಟಕ – ೫ | ಕವಿ ಕಾವ್ಯ ಪ್ರೇರಣೆ ಮತ್ತು ಪ್ರಭಾವ | ೬೭–೮೬ |
| ಘಟಕ – ೬ | ದಾಂಪತ್ಯ ಮತ್ತು ಪ್ರೇಮ ಗೀತೆಗಳು | ೮೭–೧೦೭ |
| ಘಟಕ – ೭ | ಆಧ್ಯಾತ್ಮ ಮತ್ತು ಪ್ರಕೃತಿ ಗೀತೆಗಳು | ೧೦೮–೧೨೯ |
| ಘಟಕ – ೮ | ಸಾಮಾಜಿಕ ಮತ್ತು ಇತರೆ ಗೀತೆಗಳು | ೧೩೦–೧೫೧ |

## ಬ್ಲಾಕ್–೩ ಭೂಮಿಗೀತ


| | | ಪುಟ ಸಂಖ್ಯೆ |
|---|---|---|
| ಘಟಕ – ೯ | ಕವಿ ಕಾವ್ಯ, ಪ್ರೇರಣೆ ಪ್ರಭಾವ. | ೧೫೨–೧೬೬ |
| ಘಟಕ – ೧೦ | ಭೂಮಿಗೀತ : (೧) 'ಭೂಮಿಗೀತ' (೨) 'ಹಳೆಮನೆಯ ಮಂದಿ' ಮತ್ತು (೩) 'ಹದ್ದು' ಕವಿತೆಗಳು – ಕವನಗಳ ವಸ್ತು. | ೧೬೭–೧೯೫ |
| ಘಟಕ – ೧೧ | ಭೂಮಿಗೀತ : 'ಪ್ರಾರ್ಥನೆ', 'ಭೂತ' ಮತ್ತು 'ಸ್ವಾತಂತ್ರ್ಯ: ೧೯೫೮ರ ಪಾಠ' ಕವಿತೆಗಳು – ಕವನಗಳ ವಿಶ್ಲೇಷಣೆ. | ೧೯೬–೨೧೬ |
| ಘಟಕ – ೧೨ | ಕೃತಿ ವಿಮರ್ಶೆ | ೨೧೭–೨೩೮ |


## ಬ್ಲಾಕ್–೪ ಸಾವಿರಾರು ನದಿಗಳು ಮತ್ತು ನೀರು ಲೋಹದ ಚಿಂತೆ


| | | ಪುಟ ಸಂಖ್ಯೆ |
|---|---|---|
| ಘಟಕ – ೧೩ | ಕವಿ ಕಾವ್ಯ, ಪ್ರೇರಣೆ ಪ್ರಭಾವ. ಸಾವಿರಾರು ನದಿಗಳು ಸಂಕಲನದ ಆಯ್ದ ಕವಿತೆಗಳ ಪರಿಚಯ. | ೨೩೯–೨೫೫ |
| ಘಟಕ – ೧೪ | ಸಾವಿರಾರು ನದಿಗಳು ಆಯ್ದ ಕವನಗಳ ವಿಶ್ಲೇಷಣೆ. | ೨೫೬–೨೭೨ |
| ಘಟಕ – ೧೫ | ಕವಿ ಕಾವ್ಯ: ಪ್ರೇರಣೆ ಮತ್ತು ಪ್ರಭಾವ ಮತ್ತು ನೀರು ಲೋಹದ ಚಿಂತೆ ಆಯ್ದ ಕವಿತೆಗಳ – ಪರಿಚಯ. | ೨೭೩–೨೯೪ |
| ಘಟಕ – ೧೬ | ನೀರು ಲೋಹದ ಚಿಂತೆ: ಆಯ್ದ ಕವಿತೆಗಳ ವಿಶ್ಲೇಷಣೆ. | ೨೯೫–೩೧೧ |

## ಕ್ರೆಡಿಟ್ ಪುಟ

| | | |
|---|---|---|
| **ಕಾರ್ಯಕ್ರಮದ ಹೆಸರು:** ಎಂ.ಎ. | **ಕಾರ್ಯಕ್ರಮದ ಕೋಡ್:** MKAN | **ಸೆಮಿಸ್ಟರ್:** ಪ್ರಥಮ |
| **ವಿಷಯದ ಹೆಸರು:** ಕನ್ನಡ | **ಕೋರ್ಸ್ ಕೋಡ್:** MKAN.HC:1.1 | **ಕ್ರೆಡಿಟ್:** ೪ |
| **ಬ್ಲಾಕ್ ಸಂಖ್ಯೆ:** ೧–೪ | **ಯೂನಿಟ್:** ೧ ರಿಂದ ೧೬ | **ಪುಟಗಳು:** ೩೧೧ |

### ಪಠ್ಯಕ್ರಮ ವಿನ್ಯಾಸ ಮತ್ತು ತಜ್ಞರ ಸಮಿತಿ

| | | |
|---|---|---|
| **ಕುಲಪತಿಗಳು** | ಪ್ರೊ. ಶರಣಪ್ಪ ವಿ. ಹಲಸೆ | ಅಧ್ಯಕ್ಷರು |
| **ಡೀನ್ (ಶೈಕ್ಷಣಿಕ)** | ಪ್ರೊ. ಕಾಂಬ್ಳೆ ಅಶೋಕ್ | ಸದಸ್ಯರು |
| ವಿಷಯದ ವಿನ್ಯಾಸಕರು/ವಿಷಯ ಸಂಯೋಜಕರು | ಪ್ರೊ. ನಾಗಣ್ಣ. ಡಿ | ಸದಸ್ಯರು |
| ಸ್ನಾತಕೋತ್ತರ ಅಧ್ಯಯನ ಮಂಡಳಿಯ ಅಧ್ಯಕ್ಷರು | ಡಾ. ಎನ್.ಆರ್. ಚಂದ್ರೇಗೌಡ | ಸದಸ್ಯರು |
| ವಿಭಾಗದ ಅಧ್ಯಕ್ಷರು | ಪ್ರೊ. ನಾಗಣ್ಣ. ಡಿ | ಸದಸ್ಯ ಸಂಚಾಲಕರು |

| ಲೇಖಕರು | ಕೋರ್ಸ್ ಸಂಪಾದಕರು | ಪತ್ರಿಕೆ | ಬ್ಲಾಕ್ | ಯೂನಿಟ್ |
|---|---|---|---|---|
| **ಡಾ. ಜ್ಯೋತಿ ಶಂಕರ್**<br>ಸಹಾಯಕ ಪ್ರಾಧ್ಯಾಪಕರು<br>ಕನ್ನಡ ಅಧ್ಯಯನ ಮತ್ತು ಸಂಶೋಧನಾ ವಿಭಾಗ<br>ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ,<br>ಮುಕ್ತಗಂಗೋತ್ರಿ, ಮೈಸೂರು. | **ಪ್ರೊ. ಎಂ. ಜಿ. ಮಂಜುನಾಥ್**<br>ಪ್ರಾಧ್ಯಾಪಕರು, ಕನ್ನಡ ವಿಭಾಗ,<br>ಸ್ನಾತಕೋತ್ತರ ಕೇಂದ್ರ,<br>ಮೈಸೂರು ವಿಶ್ವವಿದ್ಯಾನಿಲಯ,<br>ಹೇಮಗಂಗೋತ್ರಿ, ಹಾಸನ | ೧ | ೧ | ೧ – ೨ |
| **ಡಾ. ಜ್ಯೋತಿ ಶಂಕರ್**<br>ಸಹಾಯಕ ಪ್ರಾಧ್ಯಾಪಕರು<br>ಕನ್ನಡ ಅಧ್ಯಯನ ಮತ್ತು ಸಂಶೋಧನಾ ವಿಭಾಗ<br>ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ,<br>ಮುಕ್ತಗಂಗೋತ್ರಿ, ಮೈಸೂರು. | **ಪ್ರೊ. ಎ. ರಂಗಸ್ವಾಮಿ**<br>ಪ್ರಾಧ್ಯಾಪಕರು,<br>ಕನ್ನಡ ಅಧ್ಯಯನ ಮತ್ತು ಸಂಶೋಧನಾ ವಿಭಾಗ,<br>ಕರಾಮುವಿ, ಮುಕ್ತಗಂಗೋತ್ರಿ, ಮೈಸೂರು. | ೧ | ೧ | ೩ – ೪ |
| **ಡಾ. ಮಣಿ ಪಿ.**<br>ಸಹಾಯಕ ಪ್ರಾಧ್ಯಾಪಕರು<br>ಕನ್ನಡ ಅಧ್ಯಯನ ಮತ್ತು ಸಂಶೋಧನಾ ವಿಭಾಗ<br>ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ,<br>ಮುಕ್ತಗಂಗೋತ್ರಿ, ಮೈಸೂರು. | **ಪ್ರೊ. ಎಂ. ಜಿ. ಮಂಜುನಾಥ್**<br>ಪ್ರಾಧ್ಯಾಪಕರು, ಕನ್ನಡ ವಿಭಾಗ,<br>ಸ್ನಾತಕೋತ್ತರ ಕೇಂದ್ರ,<br>ಮೈಸೂರು ವಿಶ್ವವಿದ್ಯಾನಿಲಯ,<br>ಹೇಮಗಂಗೋತ್ರಿ, ಹಾಸನ | ೧ | ೨ | ೫ – ೬ |
| **ಡಾ. ಮಣಿ ಪಿ.**<br>ಸಹಾಯಕ ಪ್ರಾಧ್ಯಾಪಕರು<br>ಕನ್ನಡ ಅಧ್ಯಯನ ಮತ್ತು ಸಂಶೋಧನಾ ವಿಭಾಗ<br>ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ,<br>ಮುಕ್ತಗಂಗೋತ್ರಿ, ಮೈಸೂರು. | **ಪ್ರೊ. ಎ. ರಂಗಸ್ವಾಮಿ**<br>ಪ್ರಾಧ್ಯಾಪಕರು,<br>ಕನ್ನಡ ಅಧ್ಯಯನ ಮತ್ತು ಸಂಶೋಧನಾ ವಿಭಾಗ,<br>ಕರಾಮುವಿ, ಮುಕ್ತಗಂಗೋತ್ರಿ, ಮೈಸೂರು. | ೧ | ೨ | ೭ – ೮ |
| **ಡಾ. ಟಿ. ಎಂ. ಗೀತಾಂಜಲಿ**<br>ಸಹ ಪ್ರಾಧ್ಯಾಪಕರು<br>ಕನ್ನಡ ಅಧ್ಯಯನ ಮತ್ತು ಸಂಶೋಧನಾ ವಿಭಾಗ<br>ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ,<br>ಮುಕ್ತಗಂಗೋತ್ರಿ, ಮೈಸೂರು. | **ಪ್ರೊ. ಎಂ. ಜಿ. ಮಂಜುನಾಥ್**<br>ಪ್ರಾಧ್ಯಾಪಕರು, ಕನ್ನಡ ವಿಭಾಗ,<br>ಸ್ನಾತಕೋತ್ತರ ಕೇಂದ್ರ,<br>ಮೈಸೂರು ವಿಶ್ವವಿದ್ಯಾನಿಲಯ,<br>ಹೇಮಗಂಗೋತ್ರಿ, ಹಾಸನ | ೧ | ೩ | ೯ – ೧೨ |

**ಡಾ. ಟಿ. ಎಂ. ಗೀತಾಂಜಲಿ**
ಸಹ ಪ್ರಾಧ್ಯಾಪಕರು
ಕನ್ನಡ ಅಧ್ಯಯನ ಮತ್ತು ಸಂಶೋಧನಾ ವಿಭಾಗ
ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ,
ಮುಕ್ತಗಂಗೋತ್ರಿ, ಮೈಸೂರು.

**ಪ್ರೊ. ಎ. ರಂಗಸ್ವಾಮಿ** ೧ ೪ ೧೩ – ೧೬
ಪ್ರಾಧ್ಯಾಪಕರು,
ಕನ್ನಡ ಅಧ್ಯಯನ ಮತ್ತು ಸಂಶೋಧನಾ ವಿಭಾಗ,
ಕರಾಮುವಿ, ಮುಕ್ತಗಂಗೋತ್ರಿ, ಮೈಸೂರು.

**ಸಂಪಾದಕರ ಮಂಡಳಿ**

| | | |
|---|---|---|
| ಸ್ನಾತಕೋತ್ತರ ಅಧ್ಯಯನ ಮಂಡಳಿಯ ಅಧ್ಯಕ್ಷರು | ಡಾ. ಎನ್. ಆರ್. ಚಂದ್ರೇಗೌಡ | ಸದಸ್ಯರು |
| ಬಾಹ್ಯ ವಿಷಯ ತಜ್ಞರು | ಪ್ರೊ. ಎಂ. ಜಿ. ಮಂಜುನಾಥ್ | ಸದಸ್ಯರು |
| ಆಂತರಿಕ ವಿಷಯ ತಜ್ಞರು | ಪ್ರೊ. ನಾಗಣ್ಣ. ಡಿ | ಸದಸ್ಯರು |
| | ಪ್ರೊ. ಕವಿತಾ ರೈ | ಸದಸ್ಯರು |
| ಕಾರ್ಯಕ್ರಮದ ಸಂಯೋಜಕರು | ಡಾ. ಎನ್. ಆರ್. ಚಂದ್ರೇಗೌಡ | ಸದಸ್ಯರು |
| ವಿಭಾಗದ ಅಧ್ಯಕ್ಷರು/ಸಂಪಾದಕ ಮಂಡಳಿ ಅಧ್ಯಕ್ಷರು | ಪ್ರೊ. ನಾಗಣ್ಣ. ಡಿ | ಸದಸ್ಯ ಸಂಚಾಲಕರು |

**ಪ್ರಕಾಶಕರು**

**ಕುಲಸಚಿವರು (ಆಡಳಿತ)**
ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ,
ಮುಕ್ತಗಂಗೋತ್ರಿ, ಮೈಸೂರು.

**ಸಿದ್ಧಪಾಠಗಳ ಹಂಚಿಕೆ**

**ಉಪಕುಲಸಚಿವರು (ಸಿದ್ಧಪಾಠ)**
ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ,
ಮುಕ್ತಗಂಗೋತ್ರಿ, ಮೈಸೂರು.

**ಹಕ್ಕುಗಳು**

**ನಿರ್ದೇಶಕರು,** ಪ್ರಸಾರಾಂಗ ಹಾಗೂ
ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ,
ಮುಕ್ತಗಂಗೋತ್ರಿ, ಮೈಸೂರು.

**ಕಾಗದದ ಗುಣಮಟ್ಟ**

ಮುಖಪುಟ: 170 GSM
ಒಳಪುಟ: 60 GSM

**ISBN: 978-93-83739-73-8**

@ ಕರ್ನಾಟಕ ರಾಜ್ಯ ಮುಕ್ತವಿಶ್ವವಿದ್ಯಾನಿಲಯ, ಮೈಸೂರು www.ksoumysuru.ac.in ಕರ್ನಾಟಕ ರಾಜ್ಯ ಮುಕ್ತವಿಶ್ವವಿದ್ಯಾನಿಲಯದ ಪರವಾಗಿ, ಕನ್ನಡ ಅಧ್ಯಯನ ಮತ್ತು ಸಂಶೋಧನಾ ವಿಭಾಗದಿಂದ ಫೆಬ್ರವರಿ, 2023ರಲ್ಲಿ ಅಭಿವೃದ್ಧಿಪಡಿಸಲಾಗಿದೆ.

ಎಲ್ಲಾ ಹಕ್ಕುಗಳನ್ನು ಕಾದಿರಿಸಲಾಗಿದೆ. ಅಪ್ಪಣೆ ಇಲ್ಲದೆ ಈ ಕೃತಿಯನ್ನು ಪೂರ್ಣವಾಗಿ ಅಥವಾ ಭಾಗವಾಗಿ ಪುನರ್ ಮುದ್ರಿಸಬಾರದು. ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಕಾರ್ಯಕ್ರಮಗಳ ಹೆಚ್ಚಿನ ವಿವರಗಳಿಗೆ ವಿಶ್ವವಿದ್ಯಾನಿಲಯದ ಕಾರ್ಯಾಲಯ, ಮುಕ್ತಗಂಗೋತ್ರಿ, ಮೈಸೂರು – ೫೭೦ ೦೦೬ ಇಲ್ಲಿಂದ ಪಡೆಯಬಹುದು.

# ಪ್ರಸ್ತಾವನೆ

ಪ್ರಿಯ ಕಲಿಕಾರ್ಥಿ,

ದೂರಶಿಕ್ಷಣದ ಮೂಲಕ ಕನ್ನಡ ಎಂ.ಎ. ಪದವಿ ವ್ಯಾಸಂಗಕ್ಕಾಗಿ ನಮ್ಮ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ ನೀವು ಪ್ರವೇಶಾತಿ ಪಡೆದಿರುವುದು ತುಂಬಾ ಸಂತೋಷದ ಸಂಗತಿ.

ಪ್ರಥಮ ಎಂ.ಎ. ಸಿಬಿಸಿಎಸ್ ಪಠ್ಯಕ್ರಮ ಮೊದಲ ಚಾತುರ್ಮಾಸದ ಅಧ್ಯಯನಕ್ಕೆ ಪ್ರವೇಶಾತಿ ಹೊಂದಿರುವ ನಿಮ್ಮನ್ನು ವಿಭಾಗದ ಪರವಾಗಿ ಹಾಗೂ ವೈಯಕ್ತಿಕವಾಗಿ ಹೃತ್ಪೂರ್ವಕವಾಗಿ ಸ್ವಾಗತಿಸುತ್ತೇನೆ.

ಸಿಬಿಸಿಎಸ್ ಪಠ್ಯಕ್ರಮದ ಮೊದಲ ಸೆಮಿಸ್ಟರ್‌ಗೆ ಐದು ಪತ್ರಿಕೆಗಳನ್ನು ನಿಗದಿಪಡಿಸಲಾಗಿದೆ. ಈ ಪತ್ರಿಕೆಗಳಿಗೆ ಸಂಬಂಧಿಸಿದ ಮುದ್ರಿತ ಸ್ವಯಂ ಕಲಿಕಾ ಸಾಮಗ್ರಿಗಳಲ್ಲಿ ಪ್ರಸ್ತುತ ಆಧುನಿಕ ಕನ್ನಡ ಕಾವ್ಯ ಕೋರ್ಸ್–೧ ಕ್ಕೆ ಸಂಬಂಧಿಸಿದ ನಾಲ್ಕು ಬ್ಲಾಕ್‌ಗಳನ್ನು ಸಿದ್ಧಪಡಿಸಲಾಗಿದೆ.

ಆಧುನಿಕ ಕನ್ನಡ ಕಾವ್ಯ ಕೋರ್ಸ್‌ನ ಮೊದಲ ಬ್ಲಾಕ್‌ನಲ್ಲಿ ನವೋದಯ ಸಾಹಿತ್ಯದ ಮೇರು ಕವಿ ಕುವೆಂಪು ಅವರ 'ಕೋಗಿಲೆ ಮತ್ತು ಸೋವಿಯಟ್ ರಷ್ಯಾ' ಕವನ ಸಂಕಲನವನ್ನು ಸಂಪೂರ್ಣವಾಗಿ ಅಧ್ಯಯನಕ್ಕೆ ಇಡಲಾಗಿದೆ. ಈ ಸಂಬಂಧದ ಪಾಠ ಮುದ್ರಿತ ಸ್ವಯಂ ಕಲಿಕಾ ಸಾಮಗ್ರಿಗಳನ್ನು ನಾಲ್ಕು ಘಟಕಗಳಲ್ಲಿ ಪಠ್ಯ ಬೋಧಕರು ಸಿದ್ಧಪಡಿಸಿ ನೀಡಿರುತ್ತಾರೆ.

ಸಿಬಿಸಿಎಸ್ ಪಠ್ಯಕ್ರಮವನ್ನು ಕ್ರೆಡಿಟ್‌ಗಳಿಗೆ ಅನುಸಾರ ಸಿದ್ಧಪಡಿಸಿದ್ದು, ಮೊದಲ ಮೂರು ಪಠ್ಯದಲ್ಲಿ ತಲಾ ೪ ಕ್ರೆಡಿಟ್‌ಗಳು ಉಳಿದ ಎರಡು ಪಠ್ಯದಲ್ಲಿ ತಲಾ ೩ ಕ್ರೆಡಿಟ್‌ಗಳು ಇರುತ್ತವೆ. ನಿಮ್ಮ ಮೊದಲ ಚತುರ್ಮಾಸದ ಕೋರ್ಸ್‌ನಲ್ಲಿ ೫ ಪತ್ರಿಕೆಗಳಲ್ಲಿ ಹಾರ್ಡ್‌ಕೋರ್ ಪಠ್ಯಕ್ರಮದಲ್ಲಿ ಸಿದ್ಧಪಡಿಸಿದೆ.

ಪ್ರಸ್ತುತ ಆಧುನಿಕ ಕನ್ನಡ ಕಾವ್ಯ ಪತ್ರಿಕೆಯು ಹಾರ್ಡ್ ಕೋರ್ ಪತ್ರಿಕೆಯಾಗಿದ್ದು ಇದರ ಪಠ್ಯಕ್ರಮವನ್ನು ೪ ಕ್ರೆಡಿಟ್‌ಗಳಿಗೆ ಅನುಸಾರವಾಗಿ ೪ ಬ್ಲಾಕ್‌ಗಳಲ್ಲಿ ಸ್ವಯಂ ಕಲಿಕಾ ಸಾಮಗ್ರಿಗಳನ್ನು ಸಿದ್ಧಪಡಿಸಲಾಗದೆ. ಈ ಕೋರ್ಸ್‌ನಲ್ಲಿ ನಿಮಗೆ ಕುವೆಂಪು ಅವರ 'ಕೋಗಿಲೆ ಮತ್ತು ಸೋವಿಯಟ್ ರಷ್ಯಾ', ದ.ರಾ. ಬೇಂದ್ರೆಯವರ 'ಸಖೀಗೀತ', ಗೋಪಾಲಕೃಷ್ಣ ಅಡಿಗರ 'ಭೂಮಿಗೀತ', ಸಿದ್ಧಲಿಂಗಯ್ಯನವರ 'ಸಾವಿರಾರು ನದಿಗಳು' ಹಾಗೂ ವಿಜಯದಬ್ಬೆ ಅವರ 'ನೀರುಲೋಹದ ಚಿಂತೆ' ಈ ಕವನ ಸಂಕಲಗಳನ್ನು ಅಧ್ಯಯನಕ್ಕೆ ಇಡಲಾಗಿದೆ.

ಪ್ರಸ್ತುತ ಇಪ್ಪತ್ತನೆಯ ಶತಮಾನದಲ್ಲಿ ತಲೆದೋರಿದ ಆಧುನಿಕ ಕನ್ನಡ ಸಾಹಿತ್ಯ ಹಲವು ವಿಶಿಷ್ಟತೆಗಳ ಚಿಂತನೆ ಮನೋಧರ್ಮಗಳಿಂದ ಕೂಡಿದ್ದುದಾಗಿದೆ. ಇಂಗ್ಲಿಷ್ ಸಾಹಿತ್ಯ, ಗ್ರೀಕ್ ಸಾಹಿತ್ಯಗಳ ಪ್ರೇರಣೆ ಪ್ರಭಾವಗಳಿಗೂ ಒಳಗಾಗಿದೆ. ನವೋದಯ ನವ್ಯ ದಲಿತ ಬಂಡಾಯಗಳೆಂಬ ಸಾಹಿತ್ಯ ಸಂಪ್ರದಾಯದ ಅಧ್ಯಯನದ ಜೊತೆಗೆ 'ಸ್ತ್ರೀವಾದ' ಸಾಹಿತ್ಯವೂ ಸೇರಿಕೊಂಡ ವೈವಿಧ್ಯತೆ ಇದರದ್ದು. ಪ್ರಸ್ತುತ ಕೋರ್ಸ್‌ನಲ್ಲಿ ಈ ಎಲ್ಲಾ ಸಂಗತಿಗಳನ್ನು ಮನನ ಮಾಡಿಕೊಳ್ಳುವ ಅವಕಾಶ ನಿಮಗೆ ದೊರೆಯುವ ಜೊತೆಗೆ ಆಧುನಿಕ ಕನ್ನಡ ಕಾವ್ಯದ ಸ್ವರೂಪ ಮತ್ತು ಅದರ ವಿಕಾಸ ವೈಶಿಷ್ಟ್ಯಗಳು ಈ ಪತ್ರಿಕೆಯ ಅಧ್ಯಯನದಿಂದ ನಿಮಗೆ ಲಭ್ಯವಾಗುತ್ತವೆಂದು ಭಾವಿಸುತ್ತೇನೆ.

ಪ್ರಸ್ತುತ ಮೊದಲ ಬ್ಲಾಕ್‌ನಲ್ಲಿ ಸ್ವಯಂ ಕಲಿಕಾ ಸಾಮಗ್ರಿಗಳನ್ನು 'ಕೋಗಿಲೆ ಮತ್ತು ಸೋವಿಯತ್ ರಷ್ಯಾ' ಕವನ ಸಂಕಲನಕ್ಕೆ ಸಂಬಂಧಿಸಿದ್ದರೆ, ಎರಡನೆಯ ಬ್ಲಾಕ್ ದ.ರಾ. ಬೇಂದ್ರೆಯವರ 'ಸಖಿಗೀತ' ಕವನ ಸಂಕಲನಕ್ಕೆ ಸಂಬಂಧಿಸಿದ

ಸಾಮಗ್ರಿಗಳನ್ನು ಒಳಗೊಂಡಿದೆ. ೩ ಮತ್ತು ೪ ನೆಯ ಬ್ಲಾಕ್‌ನಲ್ಲಿ ಗೋಪಾಲಕೃಷ್ಣ ಅಡಿಗರ 'ಭೂಮಿಗೀತ' ಮತ್ತು ಸಿದ್ಧಲಿಂಗಯ್ಯನವರ 'ಸಾವಿರಾರು ನದಿಗಳು' ಮತ್ತು ವಿಜಯದಬ್ಬೆ ಅವರ 'ನೀರು ಲೋಹದ ಚಿಂತನೆ'ಗೆ ಸಂಬಂಧಿಸಿದ ಪಠ್ಯ ಸಾಮಗ್ರಿಗಳಿವೆ.

ಆಧುನಿಕ ಕನ್ನಡ ಸಾಹಿತ್ಯ ಲೋಕದಲ್ಲಿ ಅತ್ಯಂತ ಮಹತ್ತ್ವದ ಕಾವ್ಯನಾಮ ಅಂಬಿಕಾತನಯದತ್ತ. ಬೆರಗುಗೊಳಿಸುವಷ್ಟು ವಿಪುಲವಾದ, ವೈವಿಧ್ಯಮಯವಾದ ಸಾಹಿತ್ಯ ಸೃಷ್ಟಿಸಿದ ಸಾಧನೆ ದ.ರಾ. ಬೇಂದ್ರೆಯವರದು. ಹೊಸಗನ್ನಡ ಕಾವ್ಯಲತೆ ಸಾಕಷ್ಟು ಸಂಪದ್ಯುಕ್ತವಾಗಿ ಬೆಳೆದುಬಂದಿರುವುದಕ್ಕೆ ಇವರು ನೀಡಿರುವ ಕೊಡುಗೆ ಅದ್ವಿತೀಯವಾದದ್ದು. ಕನ್ನಡ ಭಾವಗೀತೆ ಪ್ರಪಂಚದಲ್ಲಂತೂ ಬೇಂದ್ರೆ ಒಬ್ಬ ದ್ರಷ್ಟಾರ ಕವಿ. ಈ ಪ್ರಕಾರದಲ್ಲಿ ಬೇಂದ್ರೆಯವರ ಕವಿ ಪ್ರತಿಭೆ ಮಿಂಚಿ ಮೆರೆದಿದೆ.

ಪ್ರಕೃತಿ, ಪ್ರೇಮ, ಕುಟುಂಬದ ಜೀವನದ ಸುಖ ದುಃಖಗಳು, ಅಧ್ಯಾತ್ಮ, ನಾಡಾಭಿಮಾನ, ಸಾಮಾಜಿಕ ವಿಷಮತೆ, ದೇಶದ ದಾಸ್ಯ–ದಾರಿದ್ರ್ಯ ಅನ್ಯಾಯ ಇವೇ ಮೊದಲಾದ ಸಂಗತಿಗಳು ಅಂಬಿಕಾತನಯ ದತ್ತರ ಕಾವ್ಯದ ವಸ್ತುವಾದವು. ಕುಟುಂಬ ಜೀವನದ ಒಲವು–ನಲಿವುಗಳೂ ನವೋದಯ ಕಾವ್ಯದಲ್ಲಿ ಕಾಣಿಸಿತು. ಆದರೂ ಕೌಟುಂಬಿಕ ಜೀವನದ ಜಟಿಲತೆ ಕಹಿಗಳನ್ನು ಬೇಂದ್ರೆಯಂತೆ ಕಾವ್ಯದಲ್ಲಿ ತಂದವರು ವಿರಳ. ಈ ಮಾತಿಗೆ ಅವರ 'ಸಖಿಗೀತ' ಉತ್ತಮ ನಿದರ್ಶನವಾಗಿದೆ.

ಈ ಕಲಿಕಾ ಸಾಮಗ್ರಿಯಲ್ಲಿ 'ಸಖೀಗೀತ' ಸಂಕಲನದ ಪಠ್ಯ ವಿಷಯವನ್ನು ಸಾಧ್ಯವಾದಷ್ಟು ಸರಳವಾಗಿ ಹೇಳಿದೆ. ಆದರೂ ವಿಷಯದ ಗಾಂಭೀರ್ಯವನ್ನು ಉಳಿಸಿಕೊಂಡಿದೆ. ಉನ್ನತ ಶಿಕ್ಷಣ ಬಯಸಿ ಬರುವ ಸಾಮಾನ್ಯರಿಗೂ ವಿಷಯ ಅರ್ಥವಾಗಬೇಕೆನ್ನುವುದು ಈ ಸರಳತೆಯ ಮೂಲ ಉದ್ದೇಶ. ಅದಕ್ಕಾಗಿಯೇ ಪಠ್ಯ ವಿಷಯವನ್ನು ಮುಖ್ಯ ಶೀರ್ಷಿಕೆ, ಉಪಶೀರ್ಷಿಕೆಗಳಲ್ಲಿ ವಿಂಗಡಿಸಿ ವಿಶ್ಲೇಷಿಸಿದೆ. ಸ್ವಯಂ ಅಭ್ಯಾಸದ ಪ್ರಶ್ನೆಗಳನ್ನು ನೀಡಿದೆ. ಈ ಪ್ರಶ್ನೆಗಳಿಗೆ ಚಿಂತಾನಾತ್ಮಕವಾದ ಉತ್ತರಗಳನ್ನು ಬರೆಯುವ ಅಭ್ಯಾಸವನ್ನು ನೀವು ಮಾಡಬೇಕು. ಈ ಪ್ರಶ್ನೆಗಳಲ್ಲದೆ ಇನ್ನೂ ಕೆಲವು ಉತ್ತಮ ಪ್ರಶ್ನೆಗಳನ್ನು ನೀವೇ ಹಾಕಿಕೊಂಡು ಉತ್ತರ ಬರೆಯಿರಿ. ಹೆಚ್ಚಿನ ಓದಿಗಾಗಿ ಪರಾಮರ್ಶನ ಗ್ರಂಥಗಳನ್ನು ಸೂಚಿಸಿದೆ. ಪಠ್ಯ ಗ್ರಂಥಗಳನ್ನು ಅಭ್ಯಾಸ ಮಾಡುವುದರ ಜೊತೆಗೆ ಪರಾಮರ್ಶನ ಗ್ರಂಥಗಳನ್ನೂ ದೊರಕಿಸಿಕೊಂಡು ಓದುವುದು ಹೆಚ್ಚು ಪ್ರಯೋಜನಕಾರಿ.

ವಿಭಾಗವು ಒಂದು **'ಸಮಾಲೋಚನ ಕಾರ್ಯಕ್ರಮ'** (ಸಂಪರ್ಕ ಕಾರ್ಯಕ್ರಮ) ವನ್ನು ಆಯಾ ವರ್ಷದ ವಿದ್ಯಾರ್ಥಿಗಳಿಗಾಗಿ ಏರ್ಪಡಿಸುತ್ತದೆ. ವಿಭಾಗದ ಅಧ್ಯಾಪಕರು ಈ ಸಮಾಲೋಚನ ಕಾರ್ಯಕ್ರಮದಲ್ಲಿ ಭಾಗವಹಿಸುತ್ತಾರೆ. ನಿಮ್ಮ ಸಹಪಾಠಿಗಳನ್ನು ಸಂಧಿಸುವ ಮತ್ತು ಅವರೊಡನೆ ವಿಚಾರ ವಿನಿಯಮ ಮಾಡಿಕೊಳ್ಳುವ ಅವಕಾಶವೂ ಈ ಕಾರ್ಯಕ್ರಮದಿಂದ ನಿಮಗೆ ಲಭ್ಯವಾಗುತ್ತದೆ.

ಆಧುನಿಕ ಕನ್ನಡ ಸಾಹಿತ್ಯದ ಮಹಾ ಹೆಸರು ಕುವೆಂಪು. ತಮ್ಮ ಕೃತಿಗಳ ಸಂಖ್ಯೆ, ಗಾತ್ರ, ಪ್ರಕಾರ ವೈವಿಧ್ಯ, ಸತ್ವ ಶ್ರೇಷ್ಠತೆಗಳಿಂದ ಕುವೆಂಪು ಚಿರಸ್ಮರಣೀಯರಾಗಿದ್ದಾರೆ. ನಾಟಕ, ಕಾದಂಬರಿ, ಸಣ್ಣಕತೆ, ಜೀವನ ಚರಿತ್ರೆ, ಆತ್ಮ ಚರಿತ್ರೆ, ಸಾಹಿತ್ಯ ವಿಮರ್ಶೆಯ ಕ್ಷೇತ್ರಗಳಲ್ಲಿ ಅನನ್ಯ ಕೊಡುಗೆ ಕೊಟ್ಟಿದ್ದಾರೆ. ಬೇಂದ್ರೆಯವರು ಹೇಳುವಂತೆ ಕುವೆಂಪು 'ಯುಗದ ಕವಿ, ಜಗದ ಕವಿ'. ಅವರ ಕಾವ್ಯವಾದರೂ ವೈಶಿಷ್ಟ್ಯ. ವಿನೂತನತೆಗಳ ತ್ರಿವೇಣಿಸಂಗಮ, ಅಲ್ಲಿ ಶಿಶುಗೀತೆ, ನೀಳ್ಗವನ, ಕಥನ ಕವನ, ಭಾವಗೀತೆ, ಖಂಡಕಾವ್ಯ, ಮಹಾಕಾವ್ಯಗಳ ಹಲವು ಬಗೆಗಳಿವೆ. ಸಾನೆಟ್, ಸರಳರಗಳೆ, ಪ್ರಗಾಥ, ಮಹಾಛಂದಸ್ಸು ಎಂಬ ವಿವಿಧ ಕಾವ್ಯ ರೂಪಗಳೇ ಅಲ್ಲಿವೆ. ಹೀಗೆ ಹೊಸಗನ್ನಡ ಕಾವ್ಯ ಕ್ಷೇತ್ರವನ್ನು ಶ್ರೀಮಂತಗೊಳಿಸಿ ರಾಷ್ಟ್ರಕವಿ ಎಂಬ ಖ್ಯಾತಿಗೆ ಪಾತ್ರರಾದವರು ಕುವೆಂಪು. ಕುವೆಂಪು ಅವರ ಮೊದಲ ಕವನ ಸಂಕಲನ ಬಿಗಿನರ್ಸ್ ಮ್ಯೂಸ್ ಇದು ೧೯೨೨ರಲ್ಲಿ ಪ್ರಕಟವಾಗಿದೆ. ಇದರ ವಿಶೇಷವೆಂದರೆ, ಇಲ್ಲಿರುವ ಕವನಗಳೆಲ್ಲವೂ ಇಂಗ್ಲಿಷ್‌ನಲ್ಲಿರುವುದು. ಕುವೆಂಪು ಅವರು ಈವರೆಗೆ ಇಪ್ಪತ್ತಕ್ಕೂ ಹೆಚ್ಚು ಕವನ ಸಂಕಲನಗಳನ್ನು ಪ್ರಕಟಿಸಿದ್ದಾರೆ.

ಸಾಹಿತ್ಯ ವಿದ್ಯಾರ್ಥಿಗಳಾದ ನೀವು, ಒಬ್ಬ ಕವಿಯ ಮಹತ್ವವನ್ನು ಅರಿಯುವಾಗ ಯಾವ ದಿಕ್ಕುಗಳಿಂದ ಅದನ್ನು ಒಳಹೊಕ್ಕು, ಅದರ ಮಹತ್ವವನ್ನು ಹೊರತೆಗೆದು ರಸಸ್ಯಂದಿತ್ವವನ್ನು ಗುರುತಿಸಿ, ತನ್ಮೂಲಕ ಸಾಹಿತ್ಯಕ್ಕೆ ಆ ಕವಿಯ ಕಾಣಿಕೆಯನ್ನು ಕಾಣಬೇಕೋ ತೋರಬೇಕೋ, ಅದಕ್ಕೆ ಇಲ್ಲಿನ ಕವನ ಸಂಕಲನಗಳು ಪ್ರಾತಿನಿಧಿಕ ಕೃತಿಗಳು. ಅವುಗಳನ್ನು ಕುರಿತ ವಿಶ್ಲೇಷಣೆಯಿರುವ ಈ ಕಲಿಕಾ ಸಾಮಗ್ರಿ ಸಂಪುಟಗಳು ಮಾರ್ಗದರ್ಶಿ. ಇವುಗಳ ನೆರವಿನಿಂದ ಯಾವುದೇ ಕವಿಯ ಯಾವುದೇ ಸಂಕಲವನ್ನು ಅಧ್ಯಯನ ಮಾಡುವ, ಆಸ್ವಾದನೆ ಮಾಡುವ ಕಲೆಯನ್ನು ನೀವು ಕರಗತ ಮಾಡಿಕೊಳ್ಳಬೇಕು. ಹಾಗಾದಾಗ ಸಾಹಿತ್ಯ ವಿದ್ಯಾರ್ಥಿಗಳಾಗಿ ನಿಮ್ಮ ಪ್ರಯತ್ನ ಸಾರ್ಥಕವಾಗುತ್ತದೆ. ಇಂಥ ಸಾರ್ಥಕ್ಯ ನಿಮ್ಮದಾಗಲಿ ಎಂದು ಆಶಿಸುತ್ತೇವೆ.

ಅಧ್ಯಾಪಕ ವೃಂದದ ಪರವಾಗಿ,


**ಪ್ರೊ. ನಾಗಣ್ಣ. ಡಿ**
ಅಧ್ಯಕ್ಷರು
ಕನ್ನಡ ಅಧ್ಯಯನ ಮತ್ತು ಸಂಶೋಧಾ ವಿಭಾಗ,
ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ,
ಮುಕ್ತಗಂಗೊತ್ರಿ, ಮೈಸೂರು–೦೬

**ಬ್ಲಾಕ್–೧: ಕೋಗಿಲೆ ಮತ್ತು ಸೋವಿಯಟ್ ರಷ್ಯಾ : ಕುವೆಂಪು**

## ಘಟಕ–೧

## ಕವಿ, ಕಾವ್ಯ, ಪ್ರಭಾವ, ಪ್ರೇರಣೆ

**ಪರಿವಿಡಿ:**


೧.೧ ಉದ್ದೇಶ

೧.೨ ಪೀಠಿಕೆ

೧.೩ ಜನನ–ಬಾಲ್ಯ–ಶಿಕ್ಷಣ

೧.೪ ವೃತ್ತಿ ಜೀವನ

೧.೫ ಸಾಹಿತ್ಯ ಸಾಧನೆ

೧.೬ ಸ್ವಪರೀಕ್ಷಾ ಪ್ರಶ್ನೆಗಳು

೧.೭ ಸಾರಾಂಶ

೧.೮ ಸ್ವಪರೀಕ್ಷಾ ಪ್ರಶ್ನೆಗೆ ಉತ್ತರಗಳು

೧.೯ ಅಭ್ಯಾಸ ಪ್ರಶ್ನೆಗಳು

೧.೧೦ ಪರಾಮರ್ಶನ ಗ್ರಂಥಗಳು

## ೧.೧ ಉದ್ದೇಶ

**ಈ ಘಟಕವನ್ನು ಅಧ್ಯಯನ ಮಾಡಿದ ನಂತರ ನೀವು;**

- ಕೋಗಿಲೆ ಮತ್ತು ಸೋವಿಯಟ್ ರಷ್ಯಾದ ಕರ್ತೃ ಕುವೆಂಪು ಅವರ ಬಗ್ಗೆ ಸಂಕ್ಷಿಪ್ತವಾಗಿ ಪರಿಚಯ ಮಾಡಿಕೊಳ್ಳುವಿರಿ.
- ಕುವೆಂಪು ಅವರ ವ್ಯಕ್ತಿತ್ವದ ಮೇಲೆ ಇತರರಿಂದ ಆದಂತಹ ಪ್ರಭಾವನ್ನು ಅರಿಯಬಲ್ಲಿರಿ
- ಕುವೆಂಪು ಅವರ ಕಾವ್ಯಕಲೆಗೆ ಒದಗಿಬಂದ ಪ್ರೇರಣೆ ಮತ್ತು ಪ್ರಭಾವದ ಸ್ಥೂಲನೋಟವನ್ನು ಪಡೆದುಕೊಳ್ಳುವಿರಿ
- ಕುವೆಂಪು ಅವರ ಬದುಕು ಬರಹದ ನಡುವಣ ಸಂಬಂಧವನ್ನು ಅರ್ಥಮಾಡಿಕೊಳ್ಳುವಿರಿ.

## ೧.೨ ಪೀಠಿಕೆ

ಪ್ರಿಯ ಕಲಿಕಾರ್ಥಿ,

ಕನ್ನಡ ಸಾಹಿತ್ಯಕ್ಕೆ ಸುಮಾರು ೨೦೦೦ ವರ್ಷಗಳ ಇತಿಹಾಸವಿದೆ. ಕನ್ನಡ ಅತ್ಯಂತ ಪ್ರಾಚೀನವಾದ ಭಾಷೆ ಎನ್ನುವುದಕ್ಕೆ ಈವರೆಗೆ ನಮಗೆ ದೊರೆತಿರುವ ಶಾಸನಗಳು–ಸಾಹಿತ್ಯವೇ ಸಾಕ್ಷಿ ಮತ್ತು ಹೊಸ ಸಂಶೋಧನೆಗಳೂ ಕೂಡ ಈ ಕುರಿತು ನಡೆಯುತ್ತಲೇ ಬಂದಿದೆ. ದೊರೆತಿರುವ ಆದಿಕಾವ್ಯ, ಪಂಪನದೇ ಪ್ರಬುದ್ಧವಾಗಿದೆ ಎಂದಮೇಲೆ, ಆ ಕಾವ್ಯದ ಹಿಂದೆಯೂ ಸಾಹಿತ್ಯರಚನೆ, ಭಾಷೆಯ ಬೆಳವಣಿಗೆ ಆರಂಭವಾಗಿರಲೇಬೇಕು. ಹಾಗಿದ್ದಾಗ ಮಾತ್ರವೇ ಪ್ರೌಢ ಕಾವ್ಯವೊಂದು ರಚನೆಯಾಗಲು ಸಾಧ್ಯ. ಕಾವ್ಯದ ರಚನೆಯೆಂದರೆ ಸಾಮಾನ್ಯವಾದ ಕ್ರಿಯೆಯಲ್ಲಿ, ಭಾಷೆಯ ಎಲ್ಲ ಆಯಾಮಗಳು ಬಳಕೆಯಾಗುವ ಪ್ರಕ್ರಿಯೆ, ಸಂಸ್ಕೃತಿ–ಸಮಾಜ–ಭಾಷೆ ಮೂರನ್ನು ಸಮಾನವಾಗಿ ದುಡಿಸಿಕೊಳ್ಳುವ ಪ್ರಕ್ರಿಯೆ–ಎನ್ನುವುದು ನಿರ್ವಿವಾದವಾದದ್ದೇ ಕಾವ್ಯವೆನ್ನುವುದು ಸಹೃದಯನಿಗೆ ತನ್ನ ಕಾಲದ ಎಲ್ಲ ಆಗು–ಹೋಗುಗಳ ತಿಳಿವನ್ನು ನೀಡುತ್ತಲೇ, ಕಾವ್ಯ ಧ್ವನಿಯೊಂದನ್ನು ಸೃಷ್ಟಿಮಾಡುತ್ತದೆ. ಕಾವ್ಯದ ಸತ್ವ–ಜೀವಾಳವೇ ಜೀವಂತಿಕೆ ಇರುವ ಈ ಕಾವ್ಯಧ್ವನಿ, ಪ್ರತಿಯೊಬ್ಬ ಕವಿಯೂ ತನ್ನ ಸತ್ವಯುತ ರಚನೆಗಳಿಂದಲೇ ಜೀವಂತವಾಗಿರುವುದಕ್ಕೆ ಸಾಧ್ಯವೇ ಹೊರತು–ಆತನಿಗೆ ಬಂದ ಸಂಪತ್ತಿನಿಂದ ಬಿರುದು–ಬಾವಲಿಗಳಿಂದ ಜೀವಂತಿಕೆಯನ್ನು ಪಡೆಯಲಾಗುವುದಿಲ್ಲ. ಪ್ರತಿ ಓದಿಗೆ ಹೊಸ ಅರ್ಥವನ್ನು ಸೃಜಿಸುವ ಶಕ್ತಿಯುಳ್ಳ ಕೃತಿಯೇ ಸತ್ವಯುತವಾದದ್ದು. ಅಂತಹ ಮೌಲಿಕ ರಚನೆಗಳನ್ನು ಕನ್ನಡ ಭಾಷೆಯ ಮಡಿಲಿನಲ್ಲಿ ಜತನದಿಂದ ಇರಿಸಿದ ಕವಿ **ರಸಋಷಿ ಕುವೆಂಪು** ಅವರ ವ್ಯಕ್ತಿತ್ವ ವಿಕಾಸವಾದ ಬಗೆಯನ್ನು, ಮಲೆನಾಡಿನಿಂದ ಮೈಸೂರಿಗೆ ಬಂದು ನೆಲೆಸಿದ ಪರಿಯನ್ನು ನೀವು ಈ ಘಟಕದಲ್ಲಿ ಪರಿಚಯಿಸಿಕೊಳ್ಳುವಿರಿ.

## ೧.೩ ಜನನ–ಬಾಲ್ಯ–ಶಿಕ್ಷಣ

ಭಾರತದಾದ್ಯಂತ ಕನ್ನಡದ ಪತಾಕೆಯನ್ನು ಹಾರಿಸಿದಂತಹ ಮಹಾನ್ ಕವಿ ಚೇತನ ಕುವೆಂಪು. ಕನ್ನಡ ಭಾಷೆಯ ಸತ್ವವನ್ನೇ ಜೀವನವನ್ನಾಗಿಸಿಕೊಂಡು, ಉಸಿರಾಗಿಸಿಕೊಂಡು ಬಾಳಿದಂತಹ ಕವಿ ಕುವೆಂಪು ಕನ್ನಡಕ್ಕಾಗಿ ದುಡಿದು ಉಸಿರಿರುವವರೆಗೂ ಕನ್ನಡದ ಏಳಿಗೆಗಾಗಿ ಬಾಳನ್ನೇ ಸಮರ್ಪಿಸಿದಂತಹವರು. ಕನ್ನಡಿಗರೆಲ್ಲರ ಹೆಮ್ಮೆಯ ರಾಷ್ಟ್ರಕವಿ **ಕುವೆಂಪು ಚಿಕ್ಕಮಗಳೂರು ಜಿಲ್ಲೆಯ ಕೊಪ್ಪ ತಾಲ್ಲೂಕಿನಲ್ಲಿರುವ ಮಲೆನಾಡಿನ ಮಡಿಲಿನಲ್ಲಿರುವ ಪುಟ್ಟಹಳ್ಳಿ ಹಿರೆಕೊಡಿಗೆಯಲ್ಲಿ ೧೯೦೪ ಡಿಸೆಂಬರ್ ೨೯ ರಂದು** ಕ್ರೋಧಿನಾಮಸಂವತ್ಸರದ ಮಾರ್ಗಶೀರ್ಷ ಬಹುಳ ಸಪ್ತಮೀ ಗುರುವಾರದ ಉತ್ತರಾ ನಕ್ಷತ್ರದಲ್ಲಿ **"ಕುಪ್ಪಳ್ಳಿ ವೆಂಟಕಪ್ಪ ಗೌಡ ಪುಟ್ಟಪ್ಪ"**– ಜನ್ಮತಾಳಿದರು. ಕುವೆಂಪು ಅವರಿಗೆ ತಮ್ಮ ಜನ್ಮದಿನದ ಬಗೆಗಿದ್ದ ಸಂತೋಷವೇನೆಂದರೆ ಅದೇ ಶ್ರೀ ಮಹಾಮಾತೆ ಶಾರದಾದೇವಿಯರ ಜನ್ಮತಿಥಿಯೂ ಆಗಿರುವುದು. ತಾಯಿ ಸೀತಮ್ಮ, ತಂದೆ ವೆಂಕಟಪ್ಪ ಗೌಡ (ವೆಂಕಟಯ್ಯಗೌಡ). ಕುಪ್ಪಳಿಯ ಮನೆತನ ಬತ್ತದ ಗದ್ದೆ, ಅಡಕೆತೋಟ, ದನ–ಕರು, ಆಳುಕಾಳು, ಸುತ್ತಮುತ್ತಲಿನ ಪ್ರದೇಶ ಎಲ್ಲವೂ ಮಲೆನಾಡಿನ ಪ್ರಕೃತಿ ಸೌಂದರ್ಯವನ್ನು ಹೊದ್ದು, ಮುಂಬರುವ ಕವಿ ಚೇತನಕ್ಕೆ ಅಣಿ

ಮಾಡಿದಂತಿತ್ತು, "ಮನೆಯ ಮುಂದೆಯೇ ಅಡಕೆ ತೋಟದಾಚೆಯ ಮೊದಲುಗೊಂಡು ನಡು ಆಕಾಶದವರೆಗೆಂಬಂತೆ ಗೋಡೆ ಹಾಕಿದಂತೆ ಕಡಿದಾಗಿ ವಿಜೃಂಭಿಸಿ ಮಹೋನ್ನತವಾಗಿ ಮೇಲೆದ್ದು ನಿತ್ಯ ಶ್ಯಾಮಲ ಅರಣ್ಯಾಚ್ಛಾದಿತವಾಗಿರುವ ಮಲೆ; ಮತ್ತು ಮನೆಯ ಹಿಂಬದಿಯಿಂದಲೆ ಪ್ರಾರಂಭವಾಗಿ ವಿರಳ ಮರ ಪೊದೆಗಳಿಂದ ಹಕ್ಕಲುಹಕ್ಕಲಾಗಿ ಮೇಲೇರಿ ಏರಿ ಬಂಡೆ ಮಂಡೆಯಲ್ಲಿ ಕೊನೆಗೊಂಡಿರುವ ಹಿರಿಯ ಹಾಸುಗಲ್ಲಿನ ಕವಿಶೈಲ–ಇವೆರಡೂ ಕವಿ ಹೃದಯವಾದ ಅಕ್ಕಪಕ್ಕದಲ್ಲಿರುವ ಎರಡು ಶ್ವಾಸಕೋಶಗಳಂತೆ ನನ್ನ ಬಾಲ್ಯದ ರಸಜೀವನದ ಬದುಕಿಗೆ ಉಸಿರನ್ನಿತ್ತು ಪೊರೆದಿವೆ. ಮುಂದೆ ಮಹಾಕವಿಯಾಗಲಿರುವ ಋಷಿಚೇತನದ ವಿಕಸನಕ್ಕೆ ವಿಧಿ ಅದಕ್ಕಿಂತಲೂ ಹೆಚ್ಚು ಅರ್ಹವೂ ಅನುಕೂಲವೂ ಆದ ಭಿತ್ತಿರಂಗವನ್ನು ಸಮೆಯಲಾರದೆಂದೆ ತೋರುತ್ತದೆ". (ನೆನಪಿನ ದೋಣಿಯಲ್ಲಿ, ಪು ೧೧)

ಇಂತಹ ಅದ್ಭುತವಾದ ಶ್ರೀಮಂತ ಪರಿಸರದಿಂದ ಬಂದ ಕವಿಯ ಕಲ್ಪನೆ ತನ್ನ ಸಾಹಿತ್ಯದುದ್ದಕ್ಕೂ ಪಸರಿಸಿರುವುದು ಸ್ಪಷ್ಟವಾಗಿಯೇ ಅನುಭವಕ್ಕೆ ಬರುತ್ತದೆ. ಆದರೂ ಅಲ್ಲಿನ ಮೌಢ್ಯತೆ ಕುವೆಂಪು ಅವರನ್ನು ಆಲೋಚನಪರರಾಗಿ ಮಾಡಿತ್ತು, ಜನಸಾಮಾನ್ಯರ ಬದುಕು ಮೂಢನಂಬಿಕೆಗಳು–ಕುಡಿತ–ರೋಗರುಜಿನಗಳಿಂದ ಆವೃತ್ತವಾಗಿತ್ತು. ಅವೆಲ್ಲವನ್ನೂ ತೊಡೆಯುವ ಪ್ರಯತ್ನವನ್ನು, ವೈಜ್ಞಾನಿಕ ತಿಳುವಳಿಕೆಯನ್ನು ಸಮಾಜದಲ್ಲಿ ಮೂಡಿಸುವ ಪ್ರಯತ್ನವನ್ನು ಕುವೆಂಪು ಮಾಡಿದರು, ಇಂತಹ ಚಿಂತನೆಗಳಿಂದಲೇ ಅವರು ಇತರ ಎಲ್ಲ ಕವಿಗಳಿಗಿಂತ ಭಿನ್ನವೆಂದು ಭಾಸವಾಗುವುದು.

ಕುವೆಂಪು ಬೆಳೆದಿದ್ದು ತುಂಬು ಕುಟುಂಬದಲ್ಲಿ, ಏಳೆಂಟುಮಂದಿ ಹೆಂಗಸರು, ಮೂರುನಾಲ್ಕು ಜನ ಗಂಡಸರು, ಇವರೆಲ್ಲರ ಮಕ್ಕಳು ಒಟ್ಟಿಗೆ ಇದ್ದಂತಹ ಮನೆಯದು, ಊಟ, ಉಪಚಾರಗಳೆಲ್ಲವೂ ಒಟ್ಟಿಗೇ ಆಗುತ್ತಿತ್ತು, ತಾಯಿಯೇ ಇರಬೇಕೆಂದಿರಲಿಲ್ಲ. ತಂದೆ ಅತ್ಯಂತ ಸಾತ್ವಿಕ ಪ್ರವೃತ್ತಿಯವರಾಗಿದ್ದರು–ತಾಯಿಯೂ ಇದಕ್ಕೆ ಹೊರತಾಗಿರಲಿಲ್ಲ. ಇವೆಲ್ಲದರ ಜೊತೆಗೆ ಮನೆಯಲ್ಲಿ ನಡೆಯುತ್ತಿದ್ದು ವಾರದ ಪೂಜೆಗಳು, ರಾಮಾಯಣ ಮತ್ತು ಮಹಾಭಾರತವನ್ನು ಓದಿಸಿ ಕೇಳುವ ಪರಿಪಾಠ, ಮನೆಯ ಗಂಡಸರೆಲ್ಲ ಸೇರಿ ಆಡುತಿದ್ದ ಬೇಟೆಯ ಹವ್ಯಾಸ ಕುವೆಂಪು ಅವರ ಕೂತೂಹಲಕ್ಕೆ ನೀರೆರೆಯುತ್ತಿದ್ದವು. ಅಲ್ಲಿಂದಲೇ ಎಲ್ಲವನ್ನೂ ನೋಡಿ ತಿಳಿಯುವ–ಓದಿ ತಿಳಿಯುವ ಹಂಬಲಕ್ಕೆ ನೀರೆರೆದು ಪೋಷಿಸಿದ್ದವು.

ಕುವೆಂಪು ಅವರ ವಿದ್ಯಾಭ್ಯಾಸ ಆರಂಭವಾಗಿದ್ದು ನವರಾತ್ರಿಯ ಪೂಜೆಯ ಸಂದರ್ಭದಲ್ಲಿ. "ಮಿಂದು ಮಡಿಯಾದ ಮೇಲೆ ಉಡಿದಾರ, ಲಂಗೋಟಿ, ಅಡ್ಡಪಂಚೆಗಳ ದೀಕ್ಷೆಕೊಟ್ಟು, ಮರಳ ಮೇಲೆ ಅ ಆ ಬರೆದು, ನಡುಬೆರಳ ಮೇಲೆ ತೋರುಬೆರಳನ್ನು ಇಡುವುದು ಹೇಗೆ ಎಂಬುದನ್ನು ತೋರಿಸಿ ಕಲಿಸಿ, ಅಕ್ಷರ ತಿದ್ದಲು ಹೇಳಿದ್ದರು" (ನೆನಪಿನ ದೋಣಿಯಲ್ಲಿ ಪು ೨೬) ಮನೆಯ ಉಪ್ಪರಿಗೆಯೇ ಶಾಲೆ, ಅಲ್ಲಿಯ ಐಗಳು ಪಾಠ ಹೇಳುತ್ತಿದ್ದರು, ಈ ಶಾಲೆಯಲ್ಲಿ ದಕ್ಷಿಣ ಕನ್ನಡ ಜಿಲ್ಲೆಯ ಐಗಳು ಮೊದಲನೇ ಉಪಾಧ್ಯಾಯರಾಗಿದ್ದರು, ಮುದುಕರಾಗಿದ್ದ ಮಂಜಪ್ಪ ಐಗಳು ಎರಡನೆಯವರು, ಅವರು ಕಾಯಿಲೆಯಿಂದ ತೀರಿಕೊಂಡರು. ಮೂರನೆಯವರೇ ಉಡುಪಿಯಿಂದ ಬಂದ ನಾಗಪ್ಪ ಶೆಟ್ಟಿ ಎನ್ನುವವರು, ಬಂದವರು ಒಂದು ವಾರವಿದ್ದು ಸಂತೆಗೆ ಹೋಗುವೆನೆಂದು ಹೇಳಿ ಹೋದವರು ಮತ್ತೆ ಬರಲೇ ಇಲ್ಲ, ನಾಲ್ಕನೆಯವರು ಬಂದು ಸ್ಲೇಟು–ಬಳಪದ ದರ್ಶನ ಮಾಡಿಸಿದರು. ಇಷ್ಟೆಲ್ಲಾ ಆಗುವ ವೇಳೆಗಾಗಲೇ ಇಂಗ್ಲಿಷ್ ಶಿಕ್ಷಣ ಭಾರತಾದ್ಯಂತ ಪ್ರವಹಿಸಿತ್ತು, ಅದು ಮಲೆನಾಡನ್ನು ವ್ಯಾಪಿಸಿತ್ತು, ಅದರ ಪರಿಣಾಮವಾಗಿ ಅನಂತರ ಬಂದವರು ರೋಮನ್ ಕ್ಯಾಥೋಲಿಕ್ ಜಾತಿಗೆ ಸೇರಿದ ಮಂಗಳೂರಿನ ಆನಂದರಾಯರೆನ್ನುವ ಐಗಳು. ಇವರು ಮೇಷ್ಟ್ರು ಸಾರ್ ಎನ್ನುವ ಪದಗಳಿಗೆ, ಇಂಗ್ಲಿಷ್ ಪದಗಳ ಪ್ರಯೋಗಕ್ಕೂ, ನೂತನ ರೀತಿಯ ವಿದ್ಯಾಭ್ಯಾಸಕ್ಕೂ ನಾಂದಿ ಹಾಡಿದರು. 'ಮೋಸೆಸ್' ಮೇಷ್ಟ್ರ ಅಲ್ಲಿಗೆ ಬಂದ ಮೇಲೆ ಆಂಗ್ಲಭಾಷೆ, ಕ್ರೈಸ್ತಧರ್ಮದ ಪರಿಚಯವೂ ಎಲ್ಲರಿಗಾಯಿತು, ಜುಟ್ಟು ಹೋಗಿ ಕ್ರಾಫು ಬಂದಿತು. ಇವರೆಲ್ಲರೂ ಸೇರಿ ಕುವೆಂಪು ಮತ್ತು ಇತರ ಮಕ್ಕಳ ವಿದ್ಯಭ್ಯಾಸವನ್ನು ಮುಂದುವರೆಸಲು ಎಲ್ಲ ರೀತಿಯ ಬುನಾದಿಯನ್ನು ಹಾಕಿದರೆನ್ನಬಹುದು.

ಮುಂದೆ ಮಾಧ್ಯಮಿಕ ಶಿಕ್ಷಣಕ್ಕಾಗಿ ಕುಪ್ಪಳಿಯಿಂದ ೯ ಮೈಲಿ ದೂರವಿದ್ದ ತೀರ್ಥಹಳ್ಳಿಗೆ ಕುವೆಂಪು ಬಂದರು, ತೀರ್ಥಹಳ್ಳಿಯ ಆಂಗ್ಲೋವರ್ನಾಕ್ಯುಲರ್–ಎ.ವಿ. ಸ್ಕೂಲಿನ ವಿದ್ಯಾರ್ಥಿಯಾದರು, ಅಲ್ಲಿ ಷೇಕ್ಸ್‌ಪಿಯರ್ ನ 'ದಿ ಮರ್ಚೆಂಟ್ ಆಫ್ ವೆನಿಸ್' ನಾಟಕದಲ್ಲಿ ಷೈಲಾಕ್‌ನ ಪಾತ್ರ ನಿರ್ವಹಿಸಿದ್ದರು. ನಾಟಕದಲ್ಲಿನ ಇಂಗ್ಲಿಷ್‌ನ ಸಂಭಾಷಣೆಯನ್ನು ಪೂರ್ತಿಯಾಗಿ

ಕಲಿತು ಹೇಳಿದ್ದರು. ಅದು ಒಂದನೆಯ ಮಹಾಯುದ್ದದ ಸಂದರ್ಭ–ಚಿಕ್ಕಪ್ಪ ರಾಮಣ್ಣನವರು ಅಡಕೆ ವ್ಯಾಪಾರದಲ್ಲಿ ಹೆಚ್ಚುಲಾಭ ಗಳಿಸುತ್ತೇನೆಂದು ಮದ್ರಾಸಿಗೆ ಹೋಗಿ, ಹಡಗಿಗೆ ಮತ್ತು ಅಲ್ಲಿನ ಲೈಟ್‌ಹೌಸ್‌ಗೆ ಗುಂಡು ತಗಲಿ ಜೀವ ಉಳಿಸಿಕೊಂಡು ಬರಿಗೈಲಿ ಬರಬೇಕಾಯಿತು. ಇದರಿಂದ ಕೂಡಕುಟುಂಬ ಒಡೆದು ತಂದೆ ಕುಪ್ಪಳಿ ಬಿಟ್ಟು ತೀರ್ಥಹಳ್ಳಿಯಲ್ಲಿ ಮಕ್ಕಳು ಉಳಿಯುತ್ತಿದ್ದ ಮನೆಗೆ ಬಂದು ನೆಲೆಸಿದರು. ಕುಟುಂಬದಲ್ಲಿ ಉಂಟಾಗಿದ್ದ ಒಡಕಿನಿಂದಾದ ಮಾನಸಿಕ ಕ್ಷೋಭೆ ದೈಹಿಕವಾಗಿಯೂ ಅವರನ್ನು ನಿತ್ರಾಣಗೊಳಿಸಿತು. ಜ್ವರ ಹೆಚ್ಚಾಗಿ ೧೯೧೬ ರಲ್ಲಿ ಕುವೆಂಪು ತಮ್ಮ ತಂದೆಯನ್ನು ಕಳೆದುಕೊಳ್ಳಬೇಕಾಯಿತು. ತಾಯಿ ಸೀತಮ್ಮ ಈ ಮಕ್ಕಳಿಗೆ ಅಡುಗೆ ಮಾಡಿ ನೆರವು ನೀಡಲೆಂದು ತಮ್ಮ ಇಬ್ಬರು ಹೆಣ್ಣು ಮಕ್ಕಳಾದ ದಾನಮ್ಮ ಮತ್ತು ಪುಟ್ಟಮ್ಮನೊಡನೆ ತೀರ್ಥಹಳ್ಳಿ ಸೇರಿದರು.

ತೀರ್ಥಹಳ್ಳಿಯಲ್ಲಿದ್ದಾಗಲೇ ಕುವೆಂಪು ಓದುವ ಹವ್ಯಾಸಕ್ಕೆ ಅಂಟಿಕೊಂಡಿದ್ದರು. ೧೯೨೦ ರಲ್ಲಿ ಲೋಯರ್ ಸೆಕೆಂಡರಿ ಪರೀಕ್ಷೆ ಮುಗಿಸಿ ಮೈಸೂರಿನ ಹಾರ್ಡ್‌ವಿಕ್ ಶಾಲೆಯನ್ನು ಸೇರಿದರು. ಶಾಲೆಯ ಪುಸ್ತಕ ಭಂಡಾರದ ಜೊತೆಗೆ ಮೈಸೂರಿನ ಪುಸ್ತಕ ಭಂಡಾರದ ಪುಸ್ತಕಗಳೂ ಅವರ ಜ್ಞಾನ ದಾಹವನ್ನು ತೀರಿಸಲು ಸನ್ನದ್ಧವಾಗಿದ್ದವು. ವರ್ಡ್ಸ್ ವರ್ತ್, ಶೆಲ್ಲಿ, ಕಾರ್ಲೈಲ್, ಶೇಕ್ಸ್ ಪಿಯರ್, ಮಿಲ್ಟನ್, ಟಾಲ್ ಸ್ಟಾಯ್, ಹಾರ್ಡಿ, ಸ್ಕಾಟ್ ಮೊದಲಾದವರ ಬರಹಗಳು, ರವೀಂದ್ರರ ಗೀತಾಂಜಲಿಯೂ ಅವರ ಮೇಲೆ ಪ್ರಭಾವ ಬೀರಿದವು, ಇದೇ ಸಮಯದಲ್ಲಿ ಅವರ ಮನಸ್ಸನ್ನು ಸೆಳೆದಿದ್ದು ಬ್ರೌನಿಂಗ್‌ನ 'ಪೈಡ್ ಪೈಪರ್ ಆಫ್ ಹ್ಯಾಮಲೀನ್'. ಇದು ಮುಂದೆ ಬೊಮ್ಮನಹಳ್ಳಿ ಕಿಂದರಜೋಗಿಯಾಗಿ ಕನ್ನಡದಲ್ಲಿ ಸೃಷ್ಟಿಯಾಯಿತು. ಸ್ವಾಮಿ ವಿವೇಕಾನಂದರ ಭಾಷಣಗಳೂ ಅವರ ಸತ್ವವನ್ನು ಹೆಚ್ಚಿಸುವಲ್ಲಿ ಸಹಕಾರಿಯಾದುವು. ಪ್ರೌಢಶಾಲೆಯ ವಿದ್ಯಾಭ್ಯಾಸದ ಪರಿಸರದಲ್ಲಿ ಕುವೆಂಪು ಆಂಗ್ಲಭಾಷೆಯ ಶ್ರೀಮಂತಿಕೆಯನ್ನು ಅರಿಯುತ್ತಾ ಸಾಗಿದ್ದು ಒಂದು ಮುಖವಾದರೆ, ಆಗ ಪ್ರಚಲಿತವಿದ್ದ ಸ್ವಾತಂತ್ರ್ಯ ಸಂಗ್ರಾಮದಿಂದ ಆಕರ್ಷಿತರಾಗಿ ಖಾದೀ ವಸ್ತ್ರಧಾರಿಗಳಾಗಿದ್ದು ಮತ್ತೊಂದು ಮುಖ–ಇವೆರಡನ್ನೂ ಅವರ ಸಾಹಿತ್ಯ ಸೃಷ್ಟಿಯಲ್ಲಿ ಕಾಣಬಹುದಾಗಿದೆ. ವಿದ್ಯಾರ್ಥಿ ದಿಸೆಯಲ್ಲಿರುವಾಗಲೇ ಕುವೆಂಪು ತಮ್ಮ ಸ್ನೇಹಿತರ ಜೊತೆ ಸೇರಿ ಪದ್ಮಪತ್ರಸಂಘ–Lotus union ಮಾಡಿಕೊಂಡು ಅಲ್ಲಿ ಅನೇಕ ಸಾಹಿತ್ಯದ ಕಾರ್ಯ ಚಟುವಟಿಕೆಗಳನ್ನು ನಡೆಸುತ್ತಿದ್ದರು. ಕುವೆಂಪು ಈ ಸಂಘದ ಕಾರ್ಯದರ್ಶಿಗಳಾಗಿಯೂ ಕಾರ್ಯನಿರ್ವಹಿಸಿದ್ದರು. ಇಲ್ಲಿಯೇ ಭೂಪಾಲಂ ಚಂದ್ರಶೇಖರಯ್ಯ, ನಾ.ಕಸ್ತೂರಿ, ವಿ.ಎಲ್. ಡಿಸೋಜರಂತಹವರ ಮಿತ್ರತ್ವವೂ ಗಟ್ಟಿಯಾಯಿತು. ಕುವೆಂಪು ಅವರ ಜೀವನದಲ್ಲಿ ಅತಿ ಮುಖ್ಯಪಾತ್ರ ವಹಿಸಿದಂತಹ ಶ್ರೀರಾಮಕೃಷ್ಣಶ್ರಮದ ಸ್ವಾಮಿಸಿದ್ಧೇಶ್ವರಾನಂದರ ಪರಿಚಯವೂ ಆಯಿತು.

ಕುವೆಂಪು ಅವರ ಸಾಹಿತ್ಯ ಕೃಷಿ ಇಲ್ಲಿಂದಲೇ ಆರಂಭವಾಗಿತ್ತು. ತಾವು ಕವನ ರಚಿಸಿದ ರೀತಿಯನ್ನು ಕುವೆಂಪು ಅವರೇ ಹೀಗೆ ವಿವರಿಸಿದ್ದಾರೆ–"ನನಗೆ ನೆನಪಿರುವಂತೆ ನನ್ನ ಮೊದಲು ಇಂಗ್ಲಿಷ್ ಪದ್ಯ ಅತ್ಯಂತ ಅಕಾವ್ಯಕ ಪ್ರೇರಣೆಯಿಂದ ತಯಾರಾದದ್ದು. ನನ್ನ ಗೆಳೆಯನೊಬ್ಬ ಚರಿತ್ರೆಯ ವಿದ್ಯಾರ್ಥಿ, ಚರಿತ್ರೆ ಅಂಥಾ ಕಷ್ಟ ಕೊಡುವ ವಿಷಯವಲ್ಲ. ನಾವು ಲೋವರ್ ಸೆಕೆಂಡರಿ ಓದುತ್ತಿರುವಾಗ ಎಂ.ಎಚ್. ಕೃಷ್ಣಯ್ಯಂಗಾರ್ ಬರೆದ 'ಹಿಂದೂ ದೇಶದ ಚರಿತ್ರೆಯ ಸುಲಭದ ಪಾಠಗಳು' ಪಠ್ಯಪುಸ್ತಕವಾಗಿತ್ತು, ಇಸವಿಗಳ ಪಟ್ಟಿ ಮತ್ತು ಹಾಳು ಗೌರ್ನರ್ ಜನರಲ್‌ಗಳ ಹೆಸರುಗಳ ಪಟ್ಟಿ, ಶಿವಾಜಿಯ ಕಥೆ ಮತ್ತು ಪಾಣಿಪತ್ತದ ಯುದ್ಧಗಳನ್ನು ಕುರಿತು ಕಥನ ಇವುಗಳನ್ನೆಲ್ಲ ಕಾದಂಬರಿ ಓದುವಂತೆ ಕಥೋತ್ಸಾಹದಿಂದ ಓದುತ್ತಿದ್ದೆವು. ಆದರೆ ಹೈಸ್ಕೂಲಿಗೆ ಬಂದೊಡನೆ ಇಂಗ್ಲಿಷ್ ಭಾಷೆಯಲ್ಲಿ ಚರಿತ್ರೆ ಓದಬೇಕಾಯಿತು. ಕಥೆ, ಕವಿತೆ, ನಾಟಕ, ಕಾದಂಬರಿಗಳನ್ನು ಇಂಗ್ಲಿಷ್‌ನಲ್ಲಿಯೇ ಓದಿ ಆಸ್ವಾದಿಸುತ್ತಿದ್ದ ನನ್ನಂಥ ವಿದ್ಯಾರ್ಥಿಗೂ ಹಾಳು ಚರಿತ್ರೆಯನ್ನು ಇಂಗ್ಲಿಷ್ ಭಾಷೆಯಲ್ಲಿ ಓದುವುದು ತುಂಬ ನೀರಸವಾಗುತ್ತಿತ್ತು, ಇನ್ನು ಪಠ್ಯಪುಸ್ತಕವನ್ನಲ್ಲದೆ ಬೇರೆ ಪುಸ್ತಕ ಕೈಯಲ್ಲಿ ಮುಟ್ಟದಿದ್ದ ಇತರ ವಿದ್ಯಾರ್ಥಿಗಳ ಗತಿ? ಆ ನನ್ನ ಗೆಳೆಯ ಅಕ್ಬರನ ವಿಷಯವನ್ನೋ ಔರಂಗಜೇಬನ ವಿಚಾರವನ್ನೋ ಪರೀಕ್ಷೆಗಾಗಿ ಬಾಯಿಪಾಠ ಮಾಡುತ್ತಿದ್ದ, ಮತ್ತೆ ಮತ್ತೆ ಮರೆತು ಹೋಗುತ್ತಿತ್ತು. ಆ ಚರಿತ್ರೆಯ ಸಂಗತಿಗಳನ್ನು ನಾನು ಇಂಗ್ಲಿಷ್ ನಲ್ಲಿ ಪದ್ಯದಂತೆ ರಚಿಸಿಕೊಡುತ್ತೇನೆ, ಛಂದಸ್ಸು, ಪ್ರಾಸಬದ್ಧವಾಗಿ, ಆಗ ಬಾಯಿಪಾಠ ಮಾಡಲು ಸುಲಭವಾಗುತ್ತದೆ. ಪರೀಕ್ಷೆಯಲ್ಲಿ ಆ ವಿಷಯಗಳನ್ನು ಬಾಯಿಪಾಠ ಮಾಡಿದ ಪದ್ಯವನ್ನು ಹೇಳಿಕೊಂಡು ತಿಳಿದರೆ ಬರೆಯಲೂ ಸುಲಭವಾಗುತ್ತದೆ ಎಂದು

ನಾನು ಅವನಿಗೆ ಹೇಳಿದೆ ಅವನು ಸಂತಸದಿಂದ ಹೊಂಗೂಟ್ಟಿದ. ನಾನು 'ಅಕ್ಬರ್ ಟೂಂಬ್' ಎಂದೋ 'ಔರಂಗಜೇಬ್ಸ್ ಟೂಂಬ್' ಎಂದೇ ಹೆಸರಿಟ್ಟುಕೊಂಡು ಒಂದಷ್ಟು ಪಂಕ್ತಿ ಪದ್ಯ ತಯಾರಿಸಿದೆ. ಆ ಪುಣ್ಯಾತ್ಮ ಅದನ್ನು ಸುಲಭದಲ್ಲಿ ಬಾಯಿಪಾಠ ಮಾಡಿ, ಬೇರೆ ವಿಷಯಗಳ ಮೇಲೂ ಇನ್ನಷ್ಟು ಪದ್ಯ ಬರೆದುಕೊಡಲು ಅಂಗಲಾಚಿದ. ವರ ಅನುಗ್ರಹಿಸುವ ದೇವತೆಯಂತೆ ನಾನೂ ಹೆಮ್ಮೆಯಿಂದಲೇ ಇನ್ನಷ್ಟು ಪದ್ಯ ತಯಾರಿಸಿಕೊಟ್ಟೆ. ಅದರಿಂದ ಅವರ ಪರೀಕ್ಷೆಗೆ ತುಂಬಾ ಅನುಕೂಲವಾಯಿತಂತೆ. ಹೇಗೋ ಅಂತೂ ಇಂಗ್ಲಿಷ್ ನಲ್ಲಿ ಪದ್ಯ ರಚಿಸುವುದಕ್ಕೆ ಪ್ರಾರಂಭದ ಗುದ್ದಲಿ ಪೂಜೆಯಾಯಿತು ಆ ಘಟನೆ (ನೆನಪಿನ ದೋಣಿಯಲ್ಲಿ ಪು ೧೪೮)

ಇಂಗ್ಲಿಷ್ ಸಾಹಿತ್ಯದ ಓದು ಮತ್ತು ಪ್ರಭಾವದಿಂದ ತಮ್ಮ ೧೮ ರ ಹರೆಯದಲ್ಲಿಯೇ ಅವರು ೭ ಇಂಗ್ಲಿಷ್ ಕವಿತೆಗಳ ಸಂಕಲನ Beginner's Muse ಅನ್ನು ೧೯೨೨ ರಲ್ಲಿಯೇ ಹೊರತಂದರು ಹೈಸ್ಕೂಲಿನಲ್ಲಿ ನಡೆದ ಮಹಾರಾಜ ಕೊಲಿಜಿಯೇಟ್ ಹೈಸ್ಕೂಲಿನ ವಾರ್ಷಿಕೋತ್ಸವದಲ್ಲಿ ಅವರು ತಮ್ಮ ಇಂಗ್ಲಿಷ್ ಕವನವನ್ನು ವಾಚನ ಮಾಡಿದಾಗ ಅದನ್ನು ಮೆಚ್ಚಿದ ಡಾ.ಎಂ. ಎಚ್. ಕೃಷ್ಣ ಅಯ್ಯಂಗಾರ್, ಆ ಕವನಗಳನ್ನು ಐರಿಷ್ ಕವಿ 'ಜೇಮ್ಸ್ ಕಸಿನ್ಸ್' ಅವರಿಗೆ ತೋರಿಸಲು ಹೇಳಿದರು. ಅದರಂತೆ ಕುವೆಂಪು ಮಾರನೆಯ ದಿನವೇ ಅವರನ್ನು ಭೇಟಿ ಮಾಡಿ ತಮ್ಮ ಹಸ್ತಪ್ರತಿಯನ್ನು ತೋರಿಸಿದರು. ಸ್ವದೇಶಿ ವಸ್ತ್ರ ಧರಿಸಿದ್ದ ಯುವಕ ವಿದೇಶಿ ಭಾಷೆಯಲ್ಲಿ ಬರೆದ ಕವನಗಳನ್ನು ಓದಿದ ಕಸಿನ್ಸ್ ಅವರು "ನಿಮ್ಮ ಭಾಷೆಯಲ್ಲಿ ಏನಾದರೂ ಬರೆದಿರುವಿರಾ? ಎಂದು ಕೇಳಿದರು. ಕನ್ನಡದಲ್ಲಿ ಹಾಗೆ ಬರೆಯುವುದು ಸಾಧ್ಯವಿಲ್ಲವೆಂದು ಕುವೆಂಪು ಉತ್ತರಿಸಿದಾಗ, ಕಸಿನ್ಸ್ ಅವರು, ಮಾತೃಭಾಷೆಯಲ್ಲಿ ಬರೆದಾಗ ಹೆಚ್ಚಿನ ಸೃಜನಶೀಲತೆ ಸಾಧ್ಯವೆಂದು ಸಲಹೆ ನೀಡಿದರು. ಇದು ಆ ಕ್ಷಣದಲ್ಲಿ ಕುವೆಂಪು ಅವರಿಗೆ ಅಸಮಾಧಾನ ತಂದರೂ, ಅನಂತರ ಅವರ ಅಂತರಂತ ಅದನ್ನು ಒಪ್ಪಿಕೊಂಡು ಕನ್ನಡದಲ್ಲಿಯೇ ಬರೆಯುವ ನಿರ್ಧಾರವನ್ನು ಕೈಗೊಳ್ಳುವಂತೆ ಮಾಡಿತು.

೧೯೨೪ರಲ್ಲಿ ಕುವೆಂಪು ಬಿ.ಎ. ಶಿಕ್ಷಣಕ್ಕಾಗಿ ಮಹಾರಾಜಾ ಕಾಲೇಜಿಗೆ ಬಂದರು. ಅಲ್ಲಿ ಮನಶ್ಶಾಸ್ತ್ರ ಮತ್ತು ತತ್ವಶಾಸ್ತ್ರಗಳನ್ನು ಐಚ್ಛಿಕ ವಿಷಯಗಳಾಗಿ ಆಯ್ಕೆ ಮಾಡಿಕೊಂಡು ತಮ್ಮ ವಿದ್ಯಾಭ್ಯಾಸ ಮುಂದುವರೆಸಿದರು. ಬಿ.ಎ. ಪದವಿಯನ್ನು ಮುಗಿಸಿದ ಮೇಲೆ, ಎ.ಆರ್. ಕೃಷ್ಣಶಾಸ್ತ್ರಿಗಳ ಪ್ರೇರಣೆಯಿಂದ ಕುವೆಂಪು ತತ್ವಶಾಸ್ತ್ರವನ್ನು ಬಿಟ್ಟು ೧೯೨೭ರಲ್ಲಿ ಕನ್ನಡ ಎಂ.ಎ. ಪದವಿಗೆ ಸೇರಿಕೊಂಡರು. ಇದು ಅವರ ಜೀವನದ 'ಅಮೃತಗಳಿಗೆ'ಯಾಗಿತ್ತು. ಹಾಗೇ ಕನ್ನಡ ಸಾಹಿತ್ಯಕ್ಕೆ ಭಾಗ್ಯೋದಯವಾದಂತಾಯಿತು. ಸಾಹಿತ್ಯದ ದಿಗ್ಗಜರ ಒಡನಾಟಕ ಜೊತೆಯಲ್ಲಿಯೇ ಸ್ವಾಮಿ ಸಿದ್ಧೇಶ್ವರಾನಂದರ ಆಶ್ರಯವೂ ಈಗಾಗಲೇ ದೊರೆತು, ಆಶ್ರಮದಲ್ಲಿದ್ದುದರಿಂದ ಶ್ರೀ ರಾಮಕೃಷ್ಣ ಸ್ವಾಮಿ ವಿವೇಕಾನಂದರ ಪ್ರಭಾವ ಅದರ ಮೇಲೆ ದಟ್ಟವಾಗಿಯೇ ಆಗಿತ್ತು. ಕುವೆಂಪು ವಿದ್ಯಾರ್ಥಿಯಾಗಿದಾಗಿನಿಂದಲೂ ಉತ್ತಮ ಕವನ ಕೃತಿಗಳ ರಚನೆ ಮಾಡಿ ಕನ್ನಡಿಗರಲ್ಲಿ – ಸಾಹಿತ್ಯ ದಿಗ್ಗಜರಲ್ಲಿ – ಮೂರರಲ್ಲೂ ಮನೆಮಾತಾಗಿದ್ದರು.

## ೧.೪ ವೃತ್ತಿ ಜೀವನ

ಕುವೆಂಪು ಅವರು ತಮ್ಮ ವಿದ್ಯಾಭ್ಯಾಸದ ಹಾದಿಯಲ್ಲಿರುವಾಗಲೇ ತಮ್ಮ ಸಾಹಿತ್ಯ ಕೃಷಿಯಿಂದಾಗಿ ನಾಡಿನಾದ್ಯಂತ ಜನಪ್ರಿಯವಾಗಿದ್ದರು. ಆದರೆ ಲೌಕಿಕದ ಯಾವುದೇ ವಿಷಯಗಳನ್ನು ಕುರಿತು ಅವರು ಆಲೋಚನೆ ಮಾಡುತ್ತಿರಲಿಲ್ಲ. "ಅವರ ಮನಸ್ಸು ನಾಗರಿಕ ವಾತಾವರಣಕ್ಕೆ ಮತ್ತು ಐಹಿಕ ಆಸೆ ಆಮಿಶಗಳಿಗೆ ವಶವಾಗದೆ ಮಲೆಯ ನಡುವಣ ಹಳ್ಳಿ ಕಡೆಗೆ ಎಳೆಯುತ್ತಿತ್ತು; ಸಂಸಾರದ ಕಡೆಗೆ ವಿಮುಖವಾಗಿದ್ದ ಅವರ ದೃಷ್ಟಿ ವಿರಕ್ತಿಯ ಕಡೆಗೆ ಹರಿದಿತ್ತು. ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಕನ್ನಡ ಅಧ್ಯಾಪಕರ ಕೆಲಸ ಖಾಲಿಯಿದ್ದರೂ ಅವರ ಗಮನ ಆ ಕಡೆಗೆ ಬಾಗಿರಲಿಲ್ಲ. ಸ್ವಾಮಿ ಸಿದ್ದೇಶ್ವರಾನಂದಜೀಯವರೇ ಅರ್ಜಿ ತರಿಸಿ, ಭರ್ತಿ ಮಾಡಿಸಿ, ರಿಜಿಸ್ಟ್ರಾರ್ ಅವರಿಗೆ ಕಳುಹಿಸಿಕೊಟ್ಟರು," (ರಾಷ್ಟ್ರಕವಿ ಕುವೆಂಪು, ದೇಜಗೌ, ಪು.೧೦೪). ಹೀಗೆ ಕುವೆಂಪು ತಮ್ಮ ಅಧ್ಯಾಪಕ ವೃತ್ತಿಯನ್ನು ಆರಂಭಿಸಿದರು, ಅವರ ತರಗತಿಗಳು ವಿದ್ಯಾರ್ಥಿಗಳಿಂದ ಕಿಕ್ಕಿರಿದಿರುತ್ತಿತ್ತು. ಅವರ ಓದುವಿಕೆಯ ರೀತಿ, ಅದರ ಅರ್ಥವನ್ನು ಅವರು ವಿವರಿಸುತ್ತಿದ್ದ ರೀತಿ, ಪದಗಳ ಬಳಕೆ, ತತ್ವಶಾಸ್ತ್ರ–ಮೀಮಾಂಸೆ–

ವೈಜ್ಞಾನಿಕ ಮನೋಭಾವ–ದಾರ್ಶನಿಕ ದೃಷ್ಟಿ ಎಲ್ಲವೂ ಮೇಳವಿಸಿ ಅದು ಕೇವಲ ತರಗತಿಯಾಗದೆ ಬೋಧನೆಯ ಅಮೃತಪಾನದಂತಿರುತ್ತಿತ್ತು. ಅವರ ಕಾವ್ಯಗಳೂ ಕೂಡಾ ಈ ಅಧ್ಯಾತ್ಮಯೋಗದ ತರುವಿನಲ್ಲಿ ಅರಳಿದ ಕುಸುಮಗಳೇ ಆಗಿವೆ.

ಕುವೆಂಪು ಅವರ ಮಾನಸಿಕ ಪರಿಣತಿಯನ್ನು ಅರಿತ ಸ್ವಾಮಿ ಸಿದ್ಧೇಶ್ವರಾನಂದಜೀಯವರು ಸ್ವಾಮಿ ಶಿವಾನಂದರಿಂದ ದೀಕ್ಷೆ ಕೊಡಿಸಲು ಬಂಗಾಳದ ಬೇಲೂರು ಮಠಕ್ಕೆ ಕರೆದೊಯ್ದರು. ೮–೧೦–೧೯೨೯ ರಂದು ಕುವೆಂಪು ಅವರ ಜೀವನದ ಹೆಬ್ಬಯಕೆ ನೆರವೇರಿತು. ಬೆಳಗಿನ ೬ ಗಂಟೆಗೆ ಸರಿಯಾಗಿ ಅವರಿಗೆ ಕರೆ ಬಂದಾಗ ಗುರುವಿನಲ್ಲಿ ಶರಣಾಗಿ ದೀಕ್ಷೆ–ಗುರುಮಂತ್ರ ಉಪದೇಶವನ್ನು ಪಡೆದರು. ಅಲ್ಲಿನ ವಿವೇಕಾನಂದರ ಕೊಠಡಿ, ದಕ್ಷಿಣೇಶ್ವರ ಕ್ಷೇತ್ರಗಳು ಅವರ ಮನಸ್ಸಿಗೆ ತಂಪೆರೆದಿದ್ದವು. ಇಷ್ಟರಲ್ಲಾಗಲೇ ಅವರ ಹಲವಾರು ಕೃತಿಗಳು ಪ್ರಕಟವಾಗಿ ನಾಡಿನುದ್ದಗಲಕ್ಕೂ ಅವರ ಕೀರ್ತಿಲತೆ ಹಬ್ಬಿತ್ತು. ಕುವೆಂಪು ಅವರ ಕಾವ್ಯ ವಾಚನದ ರೀತಿಯೂ ಅಷ್ಟೆ ಪ್ರಖರವಾಗಿರುತ್ತಿತ್ತು. "ಮಡಿಕೇರಿಯಲ್ಲಿ ಡಿ.ವಿ.ಗುಂಡಪ್ಪನವರ ಅಧ್ಯಕ್ಷತೆಯಲ್ಲಿ ನಡೆದ ಸಾಹಿತ್ಯ ಸಮ್ಮೇಳನದ ಸಂದರ್ಭದಲ್ಲಿ ಕುವೆಂಪು ಅವರು ಓದಿದ 'ರಕ್ತಧ್ವನಿ', 'ಕಲ್ಕಿ', 'ಪಾಂಚಜನ್ಯ', ಮೊದಲಾದ ಕವನಗಳು ಸಭಿಕರಲ್ಲಿ ಆವೇಶ ಉತ್ಸಾಹಗಳನ್ನು ಮೂಡಿಸಿದ್ದನ್ನು ಕಂಡು ಅಂಥ ಕವನಗಳನ್ನು ಓದಬಾರದೆಂದು ಎಚ್ಚರಿಕೆ ನೀಡಿದ ಶ್ರೀಯವರು ಅವುಗಳಲ್ಲಿರುವುದು 'Poetic blood', Political blood', ಅಲ್ಲ ಎಂದು ವಿವರಣೆ ನೀಡಿದ ಹಾಗೂ ಅನಂತರದಲ್ಲಿ ಕುವೆಂಪು ಅವರ ಕಾವ್ಯವಾಚನದ ಸಂದರ್ಭಗಳಲ್ಲೆಲ್ಲ ಸರ್ಕಾರದ ಗುಪ್ತಚರ ಇಲಾಖೆಯವರು ಇರುತ್ತಿದ್ದ ವಿಚಾರಗಳನ್ನು ದೇಜಗೌ ಉಲ್ಲೇಖಿಸಿದ್ದಾರೆ" (ಕುವೆಂಪು, ಡಾ. ಪ್ರಧಾನ ಗುರುದತ್ತ. ಪು.೨೫) ಕುವೆಂಪು ಅವರ ಬರವಣಿಗೆಯ ಸತ್ವವನ್ನು ಗುರುತಿಸಿ ಅನೇಕ ಗೌರವಗಳು ಅವರನ್ನು ಹುಡುಕಿ ಬರುತ್ತಿದ್ದವು. '೧೯೩೩' ರಲ್ಲಿ ಹುಬ್ಬಳ್ಳಿಯಲ್ಲಿ ಜರುಗಿದ ಸಾಹಿತ್ಯ ಸಮ್ಮೇಳನದ ಕವಿಗೋಷ್ಠಿಯ ಅಧ್ಯಕ್ಷರಾಗಿದ್ದರು.

ಕುವೆಂಪು ಅವರು ನಡೆಸುತ್ತಿದ್ದ ಜೀವನದ ಶೈಲಿಯನ್ನು ನೋಡಿ ಹಲವರು ಅವರು ಸಂನ್ಯಾಸಿಯಾಗಿ ಬಿಡುತ್ತಾರೆಂದೇ ಭಾವಿಸಿದ್ದರು. ಆದರೆ ಕುವೆಂಪು ತಮ್ಮೆಲ್ಲ ಹಿರಿಯರ, ಗುರುಗಳ ಕೃಪೆಯಿಂದಾಗಿ ಗೃಹಸ್ಥಾಶ್ರಮವನ್ನು ಸ್ವೀಕರಿಸಿದರು. ವಿಶೇಷ ಸಂಗತಿಯೆಂದರೆ ತಾವು ಈ ಮಗುವನ್ನೇ ಮದುವೆಯಾಗಬಹುದು ಎನ್ನುವ ಕಲ್ಪನೆಯೂ ಇಲ್ಲದೆ, ತಾವೇ ಆ ಮಗುವಿಗೆ 'ಹೇಮಾವತಿ' ಎನ್ನುವ ಹೆಸರನ್ನು ಸೂಚಿಸಿದ್ದರು. ಅವರೇ ಹೇಳುವಂತೆ "ಲೀಲಾಮಯಿ ಜಗದಂಬೆ ಮುಂದೆ, ಹದಿನಾರು ವರ್ಷಗಳ ಅನಂತರ ೧೯೩೭ ರಲ್ಲಿ, ನನಗೆ ಸಹಧರ್ಮಿಣಿಯಾಗಿ ನನ್ನ ಜೀವನವನ್ನು ಪಾವನಗೊಳಿಸಿ ಮಧುಮಯವನ್ನಾಗಿ ಮಾಡಲಿದ್ದ ಆ ತೊಟ್ಟಿಲ ಕೂಸಿಗೆ ನಾನೇ ಹೆಸರಿಡುವಂತೆ ವ್ಯೂಹ ಯೋಜನೆ ವಿಧಿಸಿದ್ದಳು" (ನೆನಪಿನ ದೋಣಿಯಲ್ಲಿ, ಪು. ೧೯೯) ದೇವಂಗಿಯ ರಾಮಣ್ಣಗೌಡರ ಪುತ್ರಿಯಾದ ಹೇಮಾವತಿಯವರ ಜೊತೆ ಪುಟ್ಟಪ್ಪನವರ ವಿವಾಹ ನೆರವೇರಿತು. ವಿವಾಹದ ಸಂದರ್ಭದಲ್ಲಿಯೇ ಸ್ವಂತ ಮನೆ 'ಉದಯರವಿ'ಯ ನಿರ್ಮಾಣದ ಕಾರ್ಯವೂ ಆರಂಭವಾಯಿತು. ಉದಯರವಿಯಲ್ಲಿ ಪತ್ನಿ ಹೇಮಾವತಿಯವರೊಡನೆ ಕುವೆಂಪು ತುಂಬುಜೀವನ ನಡೆಸಿದರು. ಇವರ ದಾಂಪತ್ಯದಲ್ಲಿ ಅರಳಿದ ಹೂಗಳು; ಪೂರ್ಣಚಂದ್ರ ತೇಜಸ್ವಿ (೧೯೩೮), ಕೋಕಿಲೋದಯ ಚೈತ್ರ (೧೯೪೧), ಇಂದುಕಲಾ (೧೯೪೩) ಮತ್ತು ತಾರಿಣಿ (೧೯೪೫). ಒಟ್ಟಾರೆಯಾಗಿ ಒಂದು ಸರಳ–ಸಜ್ಜನಿಕೆಯ, ಸುಂದರ ಆದರ್ಶ ಕುಟುಂಬ ಕುವೆಂಪು ಅವರದು.

ಕುವೆಂಪು ೧೯೩೬ ರಿಂದ ಬೆಂಗಳೂರಿನ ಸೆಂಟ್ರಲ್ ಕಾಲೇಜಿನಲ್ಲಿ ಕನ್ನಡ ಉಪ ಪ್ರಾಧ್ಯಾಪಕರಾಗಿ ಕಾರ್ಯ ನಿರ್ವಹಿಸಿದರು. ೧೯೪೬ ರಲ್ಲಿ ಎ.ಆರ್. ಕೃಷ್ಣಶಾಸ್ತ್ರಿಗಳ ನಿವೃತ್ತಿಯಾದ ಮೇಲೆ ಅದೇ ಸ್ಥಾನದಲ್ಲಿ ಮೈಸೂರಿನ ಮಹಾರಾಜಾ ಕಾಲೇಜಿನಲ್ಲಿ ಕುವೆಂಪು ಪ್ರಾಧ್ಯಾಪಕರಾದರು. ತರಗತಿಯಲ್ಲಿ ಕಾವ್ಯಮೀಮಾಂಸೆ, ಸೌಂದರ್ಯ ಮೀಮಾಂಸೆ, ಆಧುನಿಕ ಅವರಿಗೆ ಮನೋವಿಜ್ಞಾನ ಹಾಗೂ ಪಾಶ್ಚಾತ್ಯ ಮತ್ತು ಪೌರತ್ವ ತತ್ವಶಾಸ್ತ್ರ ಬೋಧನೆ ಅವರಿಗೆ ಅತ್ಯಂತ ಪ್ರಿಯವಾಗಿತ್ತು. ೧೯೫೫ ರಲ್ಲಿ ಶ್ರೀರಾಮಾಯಣ ದರ್ಶನಂ ಮಹಾಕಾವ್ಯಕ್ಕೆ ಕೇಂದ್ರ ಸಾಹಿತ್ಯ ಅಕಾಡೆಮಿಯ ಪ್ರಶಸ್ತಿ ದೊರೆಯಿತು ಮತ್ತು ಇದೇ ವರ್ಷ ಮಹಾರಾಜಾ ಕಾಲೇಜಿನ ಪ್ರಿನ್ಸಿಪಾಲ್ ಆಗಿಯೂ ಕುವೆಂಪು ನೇಮಕವಾದರು. ಮೈಸೂರು ವಿಶ್ವವಿದ್ಯಾನಿಲಯದ

ಆಶ್ರಯದಲ್ಲಿಯೇ ೩೩ನೇ ಕನ್ನಡ ಸಾಹಿತ್ಯ ಸಮ್ಮೇಳನ ನಡೆಸಿದ ಹೆಗ್ಗಳಿಕೆಗೂ ಕುವೆಂಪು ಪಾತ್ರರಾದರು. ೧೯೫೬ ರಲ್ಲಿ ಮೈಸೂರು ವಿಶ್ವವಿದ್ಯಾನಿಲಯ ಕುವೆಂಪು ಗೌರವ ಡಿ.ಲಿಟ್. ಪ್ರಶಸ್ತಿಯನ್ನು ನೀಡಿತು. "೧೯೫೬ ರಲ್ಲಿ ಕುವೆಂಪು ಅವರು ಮೈಸೂರು ವಿಶ್ವವಿದ್ಯಾನಿಲಯದ ಉಪಕುಲಪತಿಗಳಾದದ್ದು ಪದವೀಧರರೊಬ್ಬರು ಮೊಟ್ಟಮೊದಲಿಗೆ ಅದರ ಕುಲಪತಿಗಳಾಗಿದ್ದು" ಮೊದಲನೆಯದು, ಎರಡನೆಯದು, ಡಾ. ಪ್ರಭುಶಂಕರ ಅವರು ಗುರುತಿಸಿರುವಂತೆ, "ಕನ್ನಡ ಮುನ್ಷಿ ಅಥವಾ ಕನ್ನಡ ಪಂಡಿತರು ಎಂದು ಸಹೋದ್ಯೋಗಿಗಳಿಂದ ನಿರ್ದೇಶಿಸಲ್ಪಡುತ್ತಿದ್ದ ಕನ್ನಡ ಪ್ರಾಧ್ಯಾಪಕರು ಒಂದು ವಿಶ್ವವಿದ್ಯಾನಿಲಯದ ಉಪಕುಲಪತಿಯಾದದ್ದು", ಅಷ್ಟೇ ಅಲ್ಲ, ಸ್ವಾಯತ್ತ ಸಂಸ್ಥೆಯಾಗಿ ಬದಲಾಗಿದ್ದ ಮೈಸೂರು ವಿಶ್ವವಿದ್ಯಾನಿಲಯದ ಪ್ರಪ್ರಥಮ ಕುಲಪತಿಯೂ ಅವರೇ ಆಗಿದ್ದರು. ಹೀಗಾಗಿ ವಿಶ್ವವಿದ್ಯಾನಿಲಯಕ್ಕೆ ಹೊಸದಿಕ್ಕು-ದೆಸೆಗಳನ್ನು ತೋರುವ ಮಹತ್ತರವಾದ ಜವಾಬ್ದಾರಿಯೂ ಅವರದಾಗಿತ್ತು. ಮಾನವಿಕ ವಿಷಯಗಳಿಗೆ ಸಂಬಂಧಿಸಿದ ಸ್ನಾತಕೋತರ ತರಗತಿಗಳು ಮಹಾರಾಜ ಕಾಲೇಜಿನಲ್ಲಿ ನಡೆಯುತ್ತಿದ್ದರೂ, ವಿಜ್ಞಾನ ವಿಷಯಗಳಲ್ಲಿ ಈ ವ್ಯವಸ್ಥೆಯೂ ಇರಲಿಲ್ಲ, ಅವೆಲ್ಲ ಬೆಂಗಳೂರಿನ ಸೆಂಟ್ರಲ್ ಕಾಲೇಜಿನಲ್ಲಿ ಕೇಂದ್ರೀಕೃತವಾಗಿದ್ದವು. ಹೀಗಾಗಿ ಈ ವಿಶ್ವವಿದ್ಯಾನಿಲಯದಲ್ಲಿ ಸ್ನಾತಕೋತ್ತರ ಕೇಂದ್ರ ಎಂಬುದೇ ಇರಲಿಲ್ಲ. ಈಗಿನ ಮಾನಸಗಂಗೋತ್ರಿ (ಈ ಹೆಸರನ್ನು ಕೊಟ್ಟವರೂ ಕುವೆಂಪು ಅವರೇ) ಪ್ರದೇಶವನ್ನು ಮತ್ತು ಜಯಲಕ್ಷ್ಮಿವಿಲಾಸ ಭವನವನ್ನು ಕೊಂಡು, ಅಲ್ಲಿ ಸ್ನಾತಕೋತ್ತರ ಕೇಂದ್ರವನ್ನು ಸ್ಥಾಪಿಸಿದರು. ಇದೇನೂ ಸಾಮಾನ್ಯವಾದ ಸಾಧನೆಯಾಗಿರಲಿಲ್ಲ" (ಕುವೆಂಪು, ಡಾ. ಪ್ರಧಾನ್ ಗುರುದತ್ತ, ಪು. ೨೬, ೨೭)

ಯಾವುದೇ ಅಡೆತಡೆಗಳು, ಸಣ್ಣತನಗಳು ಅಡ್ಡಿಯಾಗಿ ಬಂದರೂ ಕುವೆಂಪು ಅದೇನನ್ನೂ ಲೆಕ್ಕಿಸದೆ, ನಿರ್ಭೀತಿಯಿಂದ ಧೃಡ ಹೆಜ್ಜೆಗಳನ್ನಿಡುತ್ತಲೇ ಮುಂದೆ ಸಾಗಿದರು. ವಿದ್ಯೆ ಸಮಾಜದ ಎಲ್ಲ ವರ್ಗಕ್ಕೂ ತಲುಪಬೇಕೆನ್ನುವ ಆಕಾಂಕ್ಷೆಯನ್ನು ಕುವೆಂಪು ಹೊಂದಿದ್ದವರು. ವಿಶ್ವವಿದ್ಯಾನಿಲಯಗಳು ಈ ದಿಸೆಯಲ್ಲಿ ಕಾರ್ಯ ನಿರ್ವಹಿಸಬೇಕೆನ್ನುವುದು ಅವರ ಕನಸಾಗಿತ್ತು. ಅದಕ್ಕಾಗಿಯೇ ಅವರು "ಬೋಧನಾಂಗ, ಸಂಶೋಧನಾಂಗ ಮತ್ತು ಪ್ರಸಾರಾಂಗ"ವನ್ನು ಒಂದು ವಿಶ್ವವಿದ್ಯಾನಿಲಯದ ಚೈತನ್ಯ ಕೇಂದ್ರಗಳೆಂದು ಕರೆದು, 'ಪ್ರಚಾರೋಪನ್ಯಾಸಮಾಲೆ' ಯಂತಹ ವಿಶೇಷ ಕಾರ್ಯಕ್ರಮಗಳನ್ನು ರೂಪಿಸಿದರು.

ಕುವೆಂಪು ಕವಿಯಾಗಿ-ಕುಲಪತಿಯಾಗಿ ಕನ್ನಡಕ್ಕಾಗಿ ಸದಾ ತುಡಿಯುತ್ತಿದ್ದವರು. ಕನ್ನಡವನ್ನು ಕನ್ನಡತನವನ್ನು ಎಲ್ಲೆಡೆಯೂ ಕಾಣಬಯಸುತ್ತಿದ್ದ ಅಂತಃಕರಣ ಅವರದು. ೧೯೫೬ ರ ನವೆಂಬರ್ ತಿಂಗಳಿನಲ್ಲಿ ಕರ್ನಾಟಕ ಏಕೀಕರಣವಾದಾಗ ನಡೆದ ರಾಜ್ಯೋದಯ ಸಮಾರಂಭದ ಅಧ್ಯಕ್ಷತೆ ವಹಿಸಿ ಅವರು ಆಡಿದ ಮಾತುಗಳು ಅವರ ಕನ್ನಡ ಪ್ರಜ್ಞೆಗೆ ಹಿಡಿದ ಕೈಗನ್ನಡಿಯಾಗಿದೆ. "ಕನ್ನಡ ರಾಜ್ಯೋದಯವೊಂದು ಅರಕ್ತ ವಿಪ್ಲವವಾಗಿದೆ. ಭರತಖಂಡದ ಭೂಪಟ ಸಹಜವಾಗಿ ಅನಿವಾರ್ಯವಾಗಿ ಆಂತರಂಗಿಕವಾಗಿ ಬದಲಾವಣೆಗೊಂಡ ಸುದಿನವಿದು. ಅಶೋಕ ಚಕ್ರವರ್ತಿಯ ಕಾಲದಲ್ಲಿಯೂ ಹಿಮಾಲಯದಿಂದ ಕನ್ಯಾಕುಮಾರಿಯವರೆಗೆ ಭರತಖಂಡ ರಾಜಕೀಯವಾಗಿ ಅಖಂಡವಾಗಿರಲಿಲ್ಲವೆಂದೇ ಹೇಳಬಹುದು. ರಾಜಕೀಯವಾಗಿ ಬೇರೆ ಬೇರೆ ರಾಜ್ಯಗಳಿದ್ದರೂ ಸಾಂಸ್ಕೃತಿಕವಾಗಿ ಅಖಂಡತ್ವ ಬಹು ಪೂರ್ವಕಾಲದಿಂದಲೂ ಸಂಸ್ಥಾಪಿತವಾಗಿದೆ. ಔತ್ತರೇಯ-ದಾಕ್ಷಿಣಾತ್ಯ, ಆ ಜಾತಿ-ಈ ಜಾತಿ, ಆ ಮತ, ಈ ಮತ, ಎಂಬ ಭೇದವಿಲ್ಲದೆ ವೇದೋಪನಿಷತ್ತು ಪುರಾಣೇತಿಹಾಸ ದರ್ಶನಗಳೂ, ಅಲ್ಲಿ ಪ್ರತಿಪಾದಿತವಾಗಿರುವ ಉದಾತ್ತ ತತ್ತ್ವಗಳೂ ಸರ್ವಜನಾದರಣೀಯವಾಗಿವೆ; ಅಲ್ಲಿ ಕಾಣುವ ಆಧ್ಯಾತ್ಮಿಕ ವಿಚಾರದಲ್ಲಿ ಎಲ್ಲರೂ ಒಂದೇ ವಿಧವಾದ ಶ್ರದ್ಧಾಭಕ್ತಿ ಗೌರವವುಳ್ಳವರಾಗಿದ್ದಾರೆ; ಪ್ರಪಂಚದ ಅನೇಕ ಸಂಸ್ಕೃತಿಗಳು ಪರಪೀಡನೆಗೆ ತುತ್ತಾಗಿವೆ; ಆದರೆ ಭಾರತೀಯ ಸಂಸ್ಕೃತಿ ಎಂಥ ವಿಷಮ ಪರಿಸ್ಥಿತಿಯಲ್ಲಿಯೂ ಅವಿನಾಶಿಯಾಗುಳಿದಿದೆ... ರಾಜಕೀಯ ಐಕ್ಯತೆಗೆ ಆರ್ಥಿಕ ಪ್ರಗತಿಗೆ ಅನ್ನಮಯದ ಅಭ್ಯುದಯಕ್ಕೆ ನಾವೆಲ್ಲ ಹಗಲಿರುಳೂ ದುಡಿಯುತ್ತಿದ್ದರೂ, ನಮ್ಮ ದೃಷ್ಟಿ ಸಂಸ್ಕೃತಿಯ ಕಡೆಗೆ ಸದಾ ಬಾಗಿರಬೇಕು. ಮಾತ್ಸರ್ಯ ದ್ವೇಷಗಳನ್ನು ತೊರೆದು ಎಲ್ಲರೂ ಒಟ್ಟಾಗಿ ಒಮ್ಮನಸ್ಸಿನಿಂದ ದುಡಿದು ಕರ್ನಾಟಕದ ಕಲ್ಯಾಣವನ್ನು ಸಾಧಿಸುವ ಮೂಲಕ ಭರತಖಂಡದ ಹಿತವನ್ನು ಸಾಧಿಸೋಣ" (ರಾಷ್ಟ್ರಕವಿ ಕುವೆಂಪು, ದೇಜಗೌ ಪು.೨೨೧, ೨೨೨). ಡಿಗ್ರಿಯ ಮಟ್ಟದಲ್ಲಿ ಕನ್ನಡ ಮಾಧ್ಯಮವನ್ನು ಜಾರಿಗೆ ತರುವಲ್ಲಿಯೂ ಕುವೆಂಪು ಅವರ ಪಾತ್ರ ಅತ್ಯಂತ ಹಿರಿದಾಗಿತ್ತು. "ಅಧಿಕಾರಸ್ಥಾನದಲ್ಲಿದ್ದು ನಾನು ಸಾಧಿಸಬಹುದಾದ ಅತ್ಯಮೂಲ್ಯ ಕಾರ್ಯವೆಂದರೆ ಕನ್ನಡ ಮಾಧ್ಯಮಕ್ಕೆ ಸರಿಯಾದ ರೂಪ ಕೊಡುವುದು" ಎಂದೇ ಅವರು ಹೇಳಿ ಕಾರ್ಯ-ಪ್ರವೃತ್ತರಾದರು.

ಯಾವುದೇ ರೀತಿಯಲ್ಲೂ ಕುವೆಂಪು ಅವರು ತಾವಿರಿಸಿಕೊಂಡಿದ್ದ ಮೌಲ್ಯಗಳಿಂದ ಪಕ್ಕಕ್ಕೆ ಸರಿಯುತ್ತಿರಲಿಲ್ಲ. ಸಮಾಜದಲ್ಲಿ ಪ್ರಖ್ಯಾತರಾಗಿದ್ದ ಪ್ರಮುಖ ವ್ಯಕ್ತಿಯ ಮಗನಿಗೆ ಹೆಚ್ಚಿನ ಅಂಕ ನೀಡುವ ಸಲಹೆ ಬಂದಾಗ, ಅವರಿಗೆ ಪಾಠ ಹೇಳಿದರೆ ಬೇಕಾದ್ದನ್ನು ಕೊಡುವ ಆಮಿಶ ಬಂದಾಗ ಅವೆಲ್ಲವನ್ನೂ ಸಾರಾಸಗಟಾಗಿ ತಿರಸ್ಕರಿಸಿದವರು ಕುವೆಂಪು. ಯಾವುದೇ ಸಚಿವರ, ಅಧಿಕಾರಿಗಳ ಒತ್ತಡಕ್ಕೆ ಅವರೆಂದೂ ಮಣಿದವರಲ್ಲ. ಏಕೀಕರಣದ ವಿಚಾರದಲ್ಲಿ ಸಚಿವರೊಬ್ಬರಿಂದ ಎಚ್ಚರಿಕೆಯ ಮಾತುಗಳು ಬಂದಾಗ ಅದಕ್ಕೆ ಉತ್ತರ ರೂಪದಲ್ಲಿ ಅಖಂಡ ಕರ್ಣಾಟಕ ಎನ್ನುವ ಕವಿತೆಯನ್ನೇ ಬರೆದು ಕಳುಹಿಸಿದರು.

**ಅಖಂಡ ಕರ್ಣಾಟಕ:**
**ಅಲ್ತೋ ನಿಮ್ಮ ಬೂಟಾಟದ ರಾಜಕೀಯ ನಾಟಕ**
**ಇಂದು ಬಂದು ನಾಳೆ ಸಂದು**
**ಹೋಹ ಮಂತ್ರಿಮಂಡಲ**
**ರಚಿಸುವೊಂದು ಕೃತಕವಲ್ತೊ**
**ಸಿರಿಗನ್ನಡ ಸರಸ್ವತಿಯ**
**ವಜ್ರ ಕರ್ಣಕುಂಡಲ:**
**ಅಖಂಡ ಕರ್ಣಾಟಕ:**
**ಅಲ್ತೋ ನಿಮ್ಮ ಬೂಟಾಟದ ರಾಜಕೀಯ ನಾಟಕ**
**ನೃಪತುಂಗನೆ ಚಕ್ರವರ್ತಿ**
**ಪಂಪನಲ್ಲಿ ಮುಖ್ಯಮಂತ್ರಿ**
**ರನ್ನ, ಜನ್ನ, ನಾಗವರ್ಮ**
**ರಾಘವಾಂಕ ಹರಿಹರ**
**ಬಸವೇಶ್ವರ ನಾರಣಪ್ಪ**
**ಸರ್ವಜ್ಞ ಷಡಕ್ಷರ:**
**ಸರಸ್ವತಿಯೆ ರಚಿಸಿದೊಂದು**
**ನಿತ್ಯ ಸಚಿವ ಮಂಡಲ**
**ತನಗೆ ರುಚಿರಕುಂಡಲ......**

ಈ ಕವನ ಕನ್ನಡಿಗರೆಲ್ಲರ ಮನಸ್ಸಿನಲ್ಲಿ ಕ್ರಾಂತಿಯನ್ನೇ ಎಬ್ಬಿಸಿತು. ೧೯೫೭ ರಲ್ಲಿ ಧಾರವಾಡದಲ್ಲಿ ನಡೆದ ಕನ್ನಡ ಸಾಹಿತ್ಯ ಸಮ್ಮೇಳನಕ್ಕೆ ಕುವೆಂಪು ಅಧ್ಯಕ್ಷರಾದರು. 'ಸಾಂಸ್ಕೃತಿಕ ಕರ್ಣಾಟಕದ ಸ್ವರೂಪ, ಸರ್ವೋದಯ, ಸಮನ್ವಯ ಮತ್ತು ಪೂರ್ಣದೃಷ್ಟಿಯ' ಮಹತ್ವವನ್ನು ಸಾರಿ ಹೇಳಿದರು. "ನಮ್ಮ ಕರ್ಣಾಟಕ ಬರಿಯ ದೇಶ ವಿಸ್ತೀರ್ಣಕ್ಕೆ ಮಾತ್ರ ಸಂಬಂಧಪಟ್ಟದಲ್ಲ: ಕಾಲ ವಿಸ್ತೀರ್ಣವನ್ನೂ ನಾವು ಪ್ರಮುಖವಾಗಿ ಭಾವಿಸುತ್ತೇವೆ. ಅದನ್ನು ಚದರ ಮೈಲಿಗಳಿಂದ ಅಳೆದರೆ ಸಾಲದು; ಚದರ ವರ್ಷಗಳಿಂದಲೂ ಗುರುತಿಸಬೇಕು.......ಕನ್ನಡಿಗರ ಸಂಸ್ಕೃತಿಗೆ ಪ್ರಿಯರೂಪವಾಗಿರುವ ಕರ್ಣಾಟಕದ ವಿಸ್ತಾರ ನಿರ್ದಿಗಂತವಾದದ್ದು; ಅದರ ಔನ್ನತ್ಯ ನಿಶ್ಶಿಖರವಾದದ್ದು. ಅಂತಹ ಸಂಸ್ಕೃತಿಗೆ ಕರ್ಣಾಟಕದ ಸ್ಥಾಪನೆ, ರಕ್ಷಣೆ, ಪೋಷಣೆ ಮತ್ತು ವಿಸ್ತರಣೆಗಳಿಗಾಗಿಯೆ ಸಹೃದಯ ಸಮಷ್ಟಿ ರೂಪವಾದ ಸಾಹಿತ್ಯ ಪರಿಷತ್ತು ನಿರಂತರವೂ ತಪಸ್ವಿಯಾಗಿ ದುಡಿಯಬೇಕಾಗಿದೆ....... ಬುದ್ಧಿಯನ್ನು ಎಚ್ಚರಿಸಿ ಸೂಕ್ಷ್ಮಗೊಳಿಸಿ, ನಾನಾರೂಪದ ಪ್ರಾಚೀನ ಮತ್ತು ನವೀನ ಮೌಢ್ಯಗಳಿಂದ ಅದನ್ನು ಪಾರು ಮಾಡಿ, ವಿಚಾರಪರತೆಯನ್ನೂ ವೈಜ್ಞಾನಿಕ ದೃಷ್ಟಿಯನ್ನೂ ನೆಲೆಗೊಳಿಸಿ, ಜನತೆಯನ್ನು ಸಮನ್ವಯ, ಸರ್ವೋದಯ ಮತ್ತು ಪೂರ್ಣದೃಷ್ಟಿಗಳ ಕಡೆಗೆ ತಿರುಗಿಸುವ ಹೊರೆ ಹೊಣೆ ಎರಡೂ ಕತ್ತಿ ಕುಡುಗೋಲುಗಳಿಗಿಂತಲೂ ಹೆಚ್ಚಾಗಿ ಲೇಖನಿಯ ಮೇಲೆಯೆ ಬೀಳುತ್ತದೆ.

ಬುದ್ಧಿಯಷ್ಟೆ, ಅಥವಾ ಅದಕ್ಕಿಂತಲೂ ಮಿಗಿಲಾಗಿಯೇ, ಹೃದಯ ಪರಿವರ್ತನೆ ಅತ್ಯಗತ್ಯ." (ರಾಷ್ಟ್ರಕವಿ ಕುವೆಂಪು, ದೇಜಗೌ, ಪು. ೨೪೩).

ಕುವೆಂಪು ಅವರ ಸಹೃದಯ ವಿಶಾಲ, ವೈಜ್ಞಾನಿಕ ಮತ್ತು ವೈಚಾರಿಕ ದೃಷ್ಟಿಕೋನ ಈಗಾಗಲೇ ದೇಶದಾದ್ಯಂತ ಮನೆ ಮಾತಾಗಿತ್ತು. ಕುವೆಂಪು ಅವರ ಸರಳತೆ ಮತ್ತು ಸಾಧನೆಯನ್ನು ಕುರಿತು ತಿಳಿದಿದ್ದ ಆಚಾರ್ಯ ವಿನೋಬಾ ಅವರು ಕುವೆಂಪು ಅವರನ್ನು ಭೇಟಿಯಾಗುವ ಆಶಯವನ್ನು ವ್ಯಕ್ತಪಡಿಸಿದರು. ಅನಂತರ ಕುವೆಂಪು ಅವರೇ ಆನೆಚೌಕೂರಿನ ಬಳಿ ಅವರನ್ನು ಭೇಟಿಮಾಡಿದರು. ಇಬ್ಬರು ಸಂತರ ಭೇಟಿಯಾದ ಅಪೂರ್ವ ದೃಶ್ಯವಾಗಿತ್ತದು. ಅಲ್ಲಿ ಕುವೆಂಪು ತಮ್ಮ ರಾಮಾಯಣ ದರ್ಶನಂನ ಕೆಲವು ಭಾಗಗಳನ್ನು ಓದಿ ವ್ಯಾಖ್ಯಾನ ಮಾಡಿದರು. ತಮ್ಮ ಅಸಾಮಾನ್ಯ ದರ್ಶನ ದೃಷ್ಟಿಯಿಂದ ಎಲ್ಲರ ಮನೆಮಾತಾಗಿದ್ದ ಕುವೆಂಪು ಅವರನ್ನು "ರಾಷ್ಟ್ರಕವಿ, ಜ್ಞಾನಪೀಠ, ಪದ್ಮಭೂಷಣ, ಕರ್ನಾಟಕ ರತ್ನ" ದಂತಹ ಅನೇಕ ಪ್ರಶಸ್ತಿಗಳು ಅರಸಿ ಬಂದವು, ಜ್ಞಾನಪೀಠ ಪ್ರಶಸ್ತಿ ಬಂದಾಗಲೂ ಅವರು ಅದಕ್ಕೆ ಉನ್ಮಾದದಿಂದ ಪ್ರತಿಕ್ರಿಯಿಸಲಿಲ್ಲ. ಕೀರ್ತಿ, ಅಧಿಕಾರಿಗಳ ಅಮಲಿನಿಂದ ದೂರವೇ ಇದ್ದಂತಹ ಕವಿಯವರು.

**ಕೋಗಿಲೆಯ ಕಂಠಕ್ಕೆ ಸ್ವರ್ಣಪದಕವ ತೊಡಿಸಿ**
**ನೇಣುಬಿಗಿಯುವುದೇಕೆ ಬಹುಮಾನವೆಂದು?**
**ಹಾರ ಭಾರಕೆ ಗೋಣು ಕುಸಿದು ಕುಗ್ಗಲು, ಗಾನ**
**ಕೊರಗಿ ಕರ್ಕಶವಾಗಿ ನರಳುವುದು ನೊಂದು**
**ಬಿರುದು ಬಾವಲಿ ಹೆಚ್ಚೆ? ಹೆಸರು ಹೊಗಳಿಕೆ ಹೆಚ್ಚೆ ?**
**ಪಿಕವರಗೆ ಶಿವ ಕೊಟ್ಟ ಸವಿಗೊರಲಿಗಿಂತ?**
**ಕೇಳಿ ಸವಿದೆಯಾ ? ಸಾಕು ಅದೇ ಪರಮ ಬಹುಮಾನ**
**ದಿವ್ಯ ನಿರ್ಲಕ್ಷತೆಯೆ ವರಕವಿಯ ಪಂಥ**

'ಕೋಗಿಲೆ ಮತ್ತು ಸೋವಿಯಟ್ ರಷ್ಯಾ'ದ ಈ ಪದ್ಯವೇ ಕುವೆಂಪು ಅವರ ನಿಲುವನ್ನು ಎತ್ತಿ ಹಿಡಿಯುತ್ತದೆ. ನಿರ್ಭಯ–ನಿರ್ಭೀತ–ಸ್ವತಂತ್ರ–ಸರಳ–ಸಜ್ಜನಿಕೆಯ ಸಾಕಾರ ರೂಪವೇ ಕುವೆಂಪು. ಅವರ ಜೀವನದ ಎಲ್ಲ ಕೆಲಸಗಳಿಗೆ ಸ್ಫೂರ್ತಿಯ ಚಿಲುಮೆಯಂತಿದ್ದವರು ಪತ್ನಿ ಹೇಮಾವತಿ, ೧೯೮೨ ಸೆಪ್ಟೆಂಬರ್ ೧೫ ರಂದು ಅವರು ಸ್ವರ್ಗಸ್ಥರಾದ ಮೇಲೆ ಕುವೆಂಪು ಅಪಾರ ನೋವನ್ನು ಅನುಭವಿಸಿದರು. ಹೇಮಾವತಿಯವರ ಮರಣದಿಂದ 'ನನ್ನ ಸೃಷ್ಟಿ ಶಕ್ತಿ ಸಮಸ್ತವೂ ತಿರೋಹಿತವಾಯಿತು!' ಎನ್ನುವ ಮಾತನ್ನು ಅವರು ಸದಾ ನುಡಿಯುತ್ತಿದ್ದರು. ದೈಹಿಕವಾಗಿಯೂ ಕುವೆಂಪು ಅವರ ಆರೋಗ್ಯ ಕ್ಷೀಣಿಸುತ್ತಾ ಬಂದು ೧೦–೧೧–೧೯೯೪ ರಂದು ಇಡೀ ಕರ್ನಾಟಕಕ್ಕೆ ಏನು ಭಾರತವನ್ನೇ ದುಃಖದ ಕಡಲಿನಲ್ಲಿ ಮುಳುಗಿಸಿ ಕುವೆಂಪು ಅನಂತದಲ್ಲಿ ಲೀನವಾದರು. ಕುವೆಂಪು ಮಲೆನಾಡನ್ನು ಪ್ರೀತಿಸಿದವರು ಅದಕ್ಕಾಗಿಯೇ ಅವರ ಆಸೆಯಂತೆಯೇ ಸಕಲ ಸರ್ಕಾರೀ ಗೌರವಗಳೊಂದಿಗೆ ಕುಪ್ಪಳಿಯಲ್ಲಿ ಅವರ ಪಾರ್ಥಿವ ಶರೀರಕ್ಕೆ ಸಂಸ್ಕಾರ ಮಾಡಲಾಯಿತು. ಕುವೆಂಪು ಈ ನಾಡು–ನುಡಿಗೆ ಸಲ್ಲಿಸಿರುವ ಅಪೂರ್ವವಾದ ಸೇವೆಯನ್ನು ಕನ್ನಡಿಗರೆಲ್ಲರೂ ಅರಿತು ಗೌರವಿಸಿದ್ದಾರೆ. "ಕುಪ್ಪಳಿಯ ಕುವೆಂಪು ಅವರ ನಿವಾಸವನ್ನು ಸ್ಮಾರಕವಾಗುವಂತೆ ರೂಪಿಸಲಾಗಿದೆ. ಅವರ ಸೂಕ್ತಿಗಳನ್ನೊಳಗೊಂಡ ಸಂದೇಶಭವನವನ್ನು ನಿರ್ಮಿಸಲಾಗಿದೆ. ಕುವೆಂಪು ಅವರ ಹೆಸರಿನಲ್ಲಿ ಸ್ನಾತಕೋತ್ತರ ಸಂಶೋಧನಾ ಕೇಂದ್ರವನ್ನೂ ಸ್ಥಾಪಿಸಲಾಗಿದೆ. ಮೈಸೂರಿನ ಕುವೆಂಪು ವಿದ್ಯಾವರ್ಧಕ ಟ್ರಸ್ಟ್ ಕುವೆಂಪು ಅವರಿಗೆ ಸಂಬಂಧಿಸಿದ ಸಾಹಿತ್ಯ ಚಟುವಟಿಕೆಗಳಿಗಾಗಿಯೇ ವಿಶೇಷವಾಗಿ ತನ್ನನ್ನು ಅರ್ಪಿಸಿಕೊಂಡಿದೆ. ಮೂರು ದಶಕಗಳಿಗಿಂತಲೂ ಹಿಂದೆಯೇ, ಕನ್ನಡ ಅಧ್ಯಯನ ಸಂಸ್ಥೆಯ ಪ್ರವೇಶದ್ವಾರಕ್ಕೆ ಅಭಿಮುಖವಾಗಿ ಕುವೆಂಪು ಅವರ ಎದೆ ಮಟ್ಟದ ಶಿಲಾ ಪ್ರತಿಮೆಯನ್ನು ಸ್ಥಾಪಿಸಿ ಅನಾವರಣಗೊಳಿಸಿದೆ ಮೈಸೂರು ವಿಶ್ವವಿದ್ಯಾನಿಲಯ, ಈ ಶತಮಾನದ ಮಹಾಸಾಹಿತಿಗೆ ಗೌರವವನ್ನು ತೋರಿ ಕನ್ನಡ ಅಧ್ಯಯನ ಸಂಸ್ಥೆಗೆ 'ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ' ಎಂದು ಪುನರ್–ನಾಮಕರಣ ಮಾಡಿದೆ. ಕರ್ನಾಟಕ ಸರ್ಕಾರದ ನೆರವಿನಿಂದ

ಮೈಸೂರು ವಿಶ್ವವಿದ್ಯಾನಿಲಯದಲ್ಲಿ 'ಕುವೆಂಪು ಪೀಠ'ದ ಸ್ಥಾಪನೆಯೂ ಆಗಿದ್ದು, ನಾಡಿನ ಖ್ಯಾತ ವಿದ್ವಾಂಸರು ಅಲ್ಲಿ ಸಂದರ್ಶಕ ಪ್ರಾಧ್ಯಾಪಕರಿಗೆ ಕೆಲಸ ಮಾಡುತ್ತಾ ಕುವೆಂಪು ಸಾಹಿತ್ಯಕ್ಕೆ ಸಂಬಂಧಿಸಿದ ಅಧ್ಯಯನ–ಸಂಶೋಧನಾ ಕಾರ್ಯಗಳನ್ನು ನಡೆಸಿಕೊಂಡು ಬರುತ್ತಿದ್ದಾರೆ, ಇದೆಲ್ಲಕ್ಕಿಂತ ಮಿಗಿಲಾಗಿ ಶಿವಮೊಗ್ಗ ಜಿಲ್ಲೆಯ ಶಂಕರಘಟ್ಟದಲ್ಲಿ ಬೆಳೆದು ಮೈಸೂರು ವಿಶ್ವವಿದ್ಯಾನಿಲಯದ ಸ್ನಾತಕೋತ್ತರ ಕೇಂದ್ರ ವಿಶ್ವವಿದ್ಯಾನಿಲಯದ ಸ್ವರೂಪವನ್ನು ಪಡೆದುಕೊಂಡಾಗ, ಸರ್ಕಾರ ಅದಕ್ಕೆ 'ಕುವೆಂಪು ವಿಶ್ವವಿದ್ಯಾನಿಲಯ'ವೆಂದೇ ನಾಮಕರಣ ಮಾಡಿದೆ. ಕುವೆಂಪು ಅವರ 'ಜಯ್‌ಭಾರತ ಜನನಿಯ ತನುಜಾತೆ, ಜಯಹೇ ಕರ್ನಾಟಕ ಮಾತೆ' ಎಂಬ ಗೀತೆಯನ್ನು ನಾಡಗೀತೆಯಾಗಿ ಅದು ಅಂಗೀಕರಿಸಿದೆ ಎಂಬುದನ್ನೂ ಇಲ್ಲಿ ಉಲ್ಲೇಖಿಸಬಹುದಾಗಿದೆ. ಆಧುನಿಕ ಯುಗದ ಅಪೂರ್ವ ಸಾಹಿತ್ಯ ಸಾಧಕನನ್ನು ಕನ್ನಡನಾಡು ಸ್ಮರಿಸಿಕೊಂಡಿರುವ ಬಗೆ ಇದು. " (ಕುವೆಂಪು, ಡಾ. ಪ್ರಧಾನ ಗುರುದತ್ತ, ಪು. ೩೪)

## ೧.೫ ಸಾಹಿತ್ಯ–ಸಾಧನೆ

ಕುವೆಂಪು ಅವರ ಸಾಹಿತ್ಯ ಸಾಧನೆ ಅಪಾರ. ಸಾಹಿತ್ಯದ ವಿವಿಧ ಪ್ರಕಾರಗಳಲ್ಲಿ ಅವರು ತಮ್ಮ ಅಮೂಲ್ಯ ಕಾಣಿಕೆಗಳನ್ನು ನೀಡಿದ್ದಾರೆ. ಕಾವ್ಯ, ಕಥೆ, ನಾಟಕ, ಕಾದಂಬರಿ, ವಿಮರ್ಶೆ, ಕಾವ್ಯಮೀಮಾಂಸೆ, ಜೀವನ ಚರಿತ್ರೆ, ವೈಚಾರಿಕ ದೃಷ್ಟಿಕೋನದ ಲೇಖನಗಳು, ಮಕ್ಕಳ ಸಾಹಿತ್ಯ, ಅನುವಾದ, ಆತ್ಮಕಥೆ, ಹೀಗೆ ಆ ಪಟ್ಟಿ ಬೆಳೆಯುತ್ತಲೇ ಹೋಗುತ್ತದೆ. ಕುವೆಂಪು ಅವರ ಸಾಹಿತ್ಯವನ್ನು ಕುರಿತಂತೆ ಬಂದಿರುವ ಗ್ರಂಥಗಳೂ ಅಪಾರ. ಕುವೆಂಪು ಕೃತಿಗಳ ಅಧ್ಯಯನ ಇಂದಿಗೂ ನಡೆಯುತ್ತಲೇ ಇದ್ದರೂ, ಅವರ ಸಾಹಿತ್ಯದ ಆಳವನ್ನು ತಿಳಿಯುವುದು ಕಷ್ಟದ ಕೆಲಸವೇ ಆಗಿದೆ. ಭಾರತೀಯ ಲೇಖಕರಲ್ಲಿ ಇಂತಹ ಮನ್ನಣೆ ಪಡೆದವರು ವಿರಳವೆನ್ನಬಹುದು. ಅವರ ಕವನಗಳು ಸುಗಮ ಸಂಗೀತ ಕ್ಷೇತ್ರದಲ್ಲಿ ಜನಪ್ರಿಯತೆಗಳಿಸಿವೆ. ಶ್ರೀ ರಾಮಾಯಣ ದರ್ಶನಂ ಗಮಕಕ್ಕೆ ಹೊಸ ಬಾಗಿಲನ್ನು ತೆರೆದಿಟ್ಟಿದೆ. ನಾಟಕಗಳು ಅನೇಕ ರಂಗ ಪ್ರಯೋಗಗಳನ್ನು ಕಂಡಿವೆ. ಕುವೆಂಪು ಅವರ ಕೃತಿಗಳು ಇಂಗ್ಲಿಷ್ ಅಲ್ಲದೆ ಅನೇಕ ಬೇರೆ ಬೇರೆ ಭಾಷೆಗಳಿಗೆ ಅನುವಾದಗೊಂಡಿವೆ. ಕುವೆಂಪು ಕೃತಿಗಳನ್ನು ಕುರಿತ ಸಂಶೋಧನೆಯನ್ನು ಹಲವಾರು ಸಂಶೋಧಕರು ಮತ್ತು ವಿಶ್ವವಿದ್ಯಾನಿಲಯಗಳು ಕೈಗೆತ್ತಿಕೊಂಡಿವೆ. ಕುವೆಂಪು ಅವರ ಸಾಹಿತ್ಯದ ಕಿರುಪರಿಚಯವನ್ನು ಈ ಭಾಗದಲ್ಲಿ ಮಾಡಿಕೊಡಲಾಗಿದೆ.

- **ಕಥನ ಕವನಗಳು**

ಕುವೆಂಪು ಅವರ ಕಥನ ಕವನಗಳು ಸರಳವಾದ, ನೇರವಾದ ನಿರೂಪಣೆಯನ್ನು ಹೊಂದಿವೆ. ಇಲ್ಲಿಯ ಕಥೆಗಳೂ ಕೂಡ ಸಾಮಾನ್ಯವಾದ ಜನಜೀವನದ ನಡುವೆಯಿಂದ ಹುಟ್ಟಿರುವಂತಹುದು. ಮಹಾಕಾವ್ಯಗಳ ಕ್ಲಿಷ್ಟತೆಯಿಲ್ಲದೆ ಎಲ್ಲರಿಗೂ ಅರ್ಥವಾಗುವ ರೀತಿಯಲ್ಲಿ ನಿರೂಪಣೆಗೊಂಡಿರುವಂತಹುವು. ಕುವೆಂಪು ಕಥನಕವನಗಳನ್ನು ಕುರಿತು ಹೇಳಿರುವುದು ಹೀಗೆ:

**ಹದಿನೆಂಟು ವರ್ಣನೆಗಳಿಲ್ಲಿಲ್ಲ, ಯಮಕಗಳು**
**ಗಮಕಗಳು ಮೇಣಲಂಕಾರಗಳು, ಪ್ರಾಸಗಳು**
**ಇಲ್ಲಿಲ್ಲ, ನಾನೇನೂ ವೃತ್ತ, ಕಂದಗಳ**
**ಮಂದೆಗಳ ಕಾಯುತಿಹ ಕುರುಬರವನೂ ಅಲ್ಲ,**
**ಪಾಂಡಿತ್ಯವೆನಗಿಲ್ಲ ಮುಚ್ಚುಮರೆ ಏತಕ್ಕೆ?**
**ಪಂಡಿತರ ಕಂಡರೆನಗಾಗುವುದೇ ಇಲ್ಲ.**
**ಪಂಡಿತರ ಮೆಚ್ಚಿಸಲು ನಾನಿದನು ಕಟ್ಟಿಲ್ಲ.**
**ದಿಟದ ಕತೆಗಾಶಿಸುವ ಪಾಮರರಿಗಾಗಿದನು**
**ಬರೆದಿಹೆನು, ನಾನೊಬ್ಬ ಪಾಮರನು**

ಕುವೆಂಪು ಅವರ ಕಥನಕವನಗಳು ಪುರಾಣ, ಚರಿತ್ರೆ, ಜಾನಪದ ಮತ್ತು ಸಾಮಾಜಿಕ ವಸ್ತುಗಳನ್ನು ಮುಖ್ಯವಾಗಿ ಆಧರಿಸಿರುವಂತಹುದು. "ಕರಿಸಿದ್ದ, ಮರಸುಬೇಟೆ, ಮಂಜಣ್ಣ ಹೇಳಿದ ಸ್ಥಳಗತೆ, ಡೂಲಿ, ನಾಗಿ, ತಾನಾಜಿ, ಪ್ರತಾಪಸಿಂಹ ಜಯಸಿಂಹನ ಕೊನೆಗಾಲ, ಕುಮುದಿನಿ, ಘಂಟಾಕರ್ಣ ಮತ್ತು ರಕ್ತರಜನಿ" ಕಥನಕವನಗಳು.

ಕುವೆಂಪು ಅವರು ಈ ಕಥಾನಕಗಳನ್ನು ನೀರಸಗೊಳಿಸದೆ, ಸಂದರ್ಭೋಚಿತವಾಗಿ ಸರಳವಾದ ಉಪಮೆಗಳನ್ನು ಬಳಸಿ, ಆಕರ್ಷಕವಾಗಿಯೇ ನಿರೂಪಿಸಿದ್ದಾರೆ; ತಮ್ಮ ಕಾವ್ಯವೈಭವದ ವಿಲಾಸವನ್ನು ಮೆರೆಯುವ ಪ್ರಲೋಭನೆಗೆ ಒಳಗಾಗದೆ, ಈ ಪ್ರಕಾರದ ಸೀಮಿತಗಳನ್ನು ಕಾಯ್ದುಕೊಂಡು ಬಂದಿದ್ದಾರೆ ಎಂಬುದು ಗಮನಾರ್ಹವಾದ ಸಂಗತಿಯಾಗುತ್ತದೆ. (ಕುವೆಂಪು, ಪ್ರಧಾನ್ ಗುರುದತ್ತ, ಪು.೫೦)

- **ಕುವೆಂಪು ಅವರ ಶಿಶುಗೀತೆಗಳು**

ಕುವೆಂಪು ಎಲ್ಲ ಬಗೆಯ ರಚನೆಯಲ್ಲಿಯೂ ಸಿದ್ಧಹಸ್ತರು. ಅವರು ರಾಮಾಯಣ ದರ್ಶನಂ ಕಾವ್ಯದ ಮಹೋನ್ನತ ಸಮಾನತೆಯ ಧ್ಯೇಯವನ್ನೂ ಚಿಂತಿಸಬಲ್ಲರು, ಅದೇ ಸಮಯದಲ್ಲಿ ಮಾನಸಿಕ ಸ್ಥಿತಿ ಇದ್ದುದರಿಂದಲೋ, ಋಷಿ ಸದೃಶ ಬಾಳ್ವೆಯಿಂದಲೋ, ಮಕ್ಕಳ ವಿಷಯದಲ್ಲೂ ಅಷ್ಟೇ ಗಂಭೀರವಾದ ಆಲೋಚನೆಗಳಿದ್ದುದರಿಂದಲೋ ಏನೋ ಅತ್ಯುತ್ತಮ ಶಿಶುಗೀತೆಗಳನ್ನು ರಚಿಸಿ ಎಲ್ಲ ಮಕ್ಕಳಿಗೆ ಕಾಣಿಕೆಯಾಗಿ ನೀಡಿದ್ದಾರೆ.

ಆ ಕೃತಿಗಳೆಂದರೆ:

- ನನ್ನ ಮನೆ
- ಮೇಘಪುರ
- ಮರಿವಿಜ್ಞಾನಿ
- ಅಮಲನ ಕಥೆ
- ಬೊಮ್ಮನಹಳ್ಳಿಯ ಕಿಂದರಿಜೋಗಿ
- ಹಾಳೂರು

ಇದರಲ್ಲಿ ಮೊದಲ ಮೂರು ಬಿಡಿ ಕವನಸಂಕಲನಗಳು. "ನನ್ನ ಮನೆಯಲ್ಲಿ –೧೫, ಮೇಘಪುರದಲ್ಲಿ ೧೧, ಮತ್ತು ಮರಿವಿಜ್ಞಾನಿಯಲ್ಲಿ ೧೩ ಕವನಗಳಿವೆ. ಇವುಗಳೆಲ್ಲವನ್ನೂ ಕೂಡಿಸಿ "ಶಿಶುಗೀತಾಂಜಲಿ' ಎನ್ನುವ ಹೆಸರಿನಲ್ಲಿಯೂ ಕವನ ಸಂಕಲನ ಪ್ರಕಟವಾಗಿದೆ. ಒಂದೊಂದು ಕವನವೂ ಮಕ್ಕಳ ಮನಸನ್ನು ತಟ್ಟುವಂತಿದೆ.

**ಕನ್ನಡ ಎನೆ ಕುಣಿದಾಡುವುದೆನ್ನೆದೆ ।**
**ಕನ್ನಡ ಎನೆ ಕಿವಿ ನಿಮಿರುವುದು !**
**ಕಾಮನ ಬಿಲ್ಲನು ಕಾಣುವ ಕವಿಯೊಲು**
**ತೆಕ್ಕನೆ ಮನ ಮೈ ಮರೆಯುವುದು.**

ಕನ್ನಡದ ಸೊಗಡನ್ನು ಮಕ್ಕಳಿಗೆ ತಿಳಿಸುವ ಈ ಗೀತೆ ಎಲ್ಲರೂ ಮೆಲುಕು ಹಾಕುವಂತಿದೆ. ಮಗುವೊಂದು ಚಂದ್ರನನ್ನು ಕಂಡು ತಾಯಿಗೆ ಪ್ರಶ್ನೆ ಮಾಡುತ್ತದೆ.

**ದೇವರ ಪೆಪ್ಪರಮೆಂಟೇನಮ್ಮಾ**
**ಗಗನದೊಳಲೆಯುವ ಚಂದಿರನು?**
**ಎಷ್ಟೇ ತಿಂದರು ಖರ್ಚೇ ಆಗದ**
**ಬೆಳೆಯುವ ಪಪ್ಪರಮೆಂಟೇನಮ್ಮಾ**

ಎಂದು ಕೇಳುವುದಲ್ಲದೆ, ಚಂದ್ರ "ಎಲ್ಲಿಗೆ ನಾ ಹೋದರಲ್ಲಿಗೆ ಬರುವನು ಅಮ್ಮಾ, ಚಂದಿರ ನನ್ನವನು" ಎಂದು ಪ್ರೀತಿಯಿಂದ ಚಂದ್ರನ ಬಗೆಗೆ ತನ್ನ ನಿಲುವನ್ನು ತಾಳಿಬಿಡುತ್ತದೆ. ಸುತ್ತಲಿನ ಪ್ರಕೃತಿಯ ವಿಸ್ಮಯವೆಲ್ಲವೂ ಮಕ್ಕಳಿಗೆ ಪ್ರಶ್ನೆಯಾಗಿ ಬಿಡುತ್ತದೆ. ಎಲ್ಲ ಗೀತೆಗಳೂ ಇದೇ ರೀತಿಯಲ್ಲಿ ಮಕ್ಕಳ ಮನಸನ್ನು ಸೂರೆಗೊಳ್ಳುವಂತಿವೆ.

- **ಸಂಕೀರ್ಣ ಗೀತೆಗಳು**

ಈ ಹಿಂದೆ ತಿಳಿಸಿದಂತಹ ಎಲ್ಲ ವಿಧಗಳಿಗಿಂತಲೂ ಭಿನ್ನವಾಗಿರುವ ಆದರೆ ಮುಖ್ಯವಾಗಿರುವ ಹಲವಾರು ಕವನಗಳಿದ್ದು, ಅವುಗಳನ್ನು ಸಂಕೀರ್ಣ ಗೀತೆಗಳ ಗುಂಪಿಗೆ ಸೇರಿಸಬಹುದಾಗಿದೆ. ಸೋಮನಾಥಪುರ ದೇವಾಲಯವನ್ನು ಕುರಿತಿರುವ ಈ ಗೀತೆ ಅತ್ಯಂತ ಜನಪ್ರಿಯವಾಗಿರುವುದು,

**ಬಾಗಿಲೊಳು ಕೈ ಮುಗಿದು ಒಳಗೆ ಬಾ ಯಾತ್ರಿಕನೆ**
**ಶಿಲೆಯಲ್ಲವೀ ಗುಡಿಯು ಕಲೆಯ ಬಲೆಯು !**
**ಕಂಬನಿಯ ಮಾಲೆಯನು ಎದೆಯ ಬಟ್ಟಲೊಳಿಟ್ಟು**
**ಧನ್ಯತೆಯ ಕುಸುಮಗಳನರ್ಪಿಸಿಲ್ಲಿ .....**
**ಕುಶಲತೆಗೆ ಬೆರೆಗಾಗಿ ಮೂಕವಾಗಿದೆ ಕಾಲವಿಲ್ಲಿ**
**ಮೂರ್ಛೆಯಲಿ ಮೈಮರೆತು ತೇಲುವುದು ಭೂಭಾರವಿಲ್ಲಿ**

ಕುವೆಂಪು ಹಾಸ್ಯ – ವಿಡಂಬನೆಗೂ ಹೆಸರಾದವರು. 'ಕೇಶಿರಾಜ' ಅಂತಹ ಒಂದು ಅಪರೂಪದ ವಿಡಂಬನ ಗೀತೆಯಾಗಿದೆ. ಆತನ ಶಬ್ದಮಣಿದರ್ಪಣ ಜನಸಾಮಾನ್ಯರಿಗೆ ಅರ್ಥವಾಗುವುಂತಹುದಲ್ಲ, ಅಂತಹ ಭಯವನ್ನು ಆಧರಿಸಿ ಬರೆದಿರುವ ಗೀತೆಯಿದು. ಕವಿ ಆ ಹೊತ್ತಿಗೆಯನ್ನು ಓದಿ ಮಲಗಿದ ಮೇಲೆ ಕೇಶಿರಾಜನ ಪುಸ್ತಕದ ಕನಸು ಕಾಣುತ್ತಾರೆ, ಕವಿ ಭಯಭೀತರಾಗಿ ಸೆಣಸಾಡುತ್ತಿರುತ್ತಾರೆ:

**ಸೂತ್ರಗಳ ಕೂರಸಿಗಳೆನ್ನೆದೆಯ ಚುಚ್ಚಿದುವು**
**ಕಂದಗಳ ಬಾಣಗಳು ಕಿಕ್ಕಿರಿದು ಮುಚ್ಚಿದುವು**
**ಸಂಧಿಗಳು ಸುತ್ತಿದುವು! ತತ್ಸಮಗಳಾವರಿಸಿ**
**ನೆತ್ತರನು ಹೀರಿದವು! ಕೋಪದಲಿ ಮೇಲ್ವಾಯ್ದು**
**ಬಡಿದಿಂದು ಕೆಡಹಿದುವು ತದ್ಭವಗಳಾಳಿ!**
**ಅಱ ಕುಳಗಳೆಂಬ ಕಾಲಾಳುಗಳು ತೇಲೈಸಿ**
**ಮೆಟ್ಟಿದುವು ಮೂರ್ಛೆಯಲಿ ನೆಲಕ್ಕುರುಳಿ ಬಿದ್ದೆ.**

ಇದೇ ಸಾಲಿನಲ್ಲಿ ನೋಡಬಹುದಾದ ಮತ್ತೊಂದು ಕವನವೆಂದರೆ 'ಕುಮಾರವ್ಯಾಸ'. ಪ್ರತಿಭಾಶಾಲಿಯಾದ ಕವಿಯೊಬ್ಬ ತನ್ನ ಹಿಂದಿನ ತಲೆಮಾರಿನ ಮಹಾನ್ ಕವಿಯ ಪ್ರತಿಭೆಗೆ ಸಲ್ಲಿಸಿರುವ ಗೌರವದಂತಿದೆ ಈ ಕವನದ ಸಾಲುಗಳು:

**ಕುಮಾರವ್ಯಾಸನು ಹಾಡಿದನೆಂದರೆ**
**ಕಲಿಯುಗ ದ್ವಾಪರವಾಗುವುದು !**
**ಭಾರತ ಕಣ್ಣಲಿ ಕುಣಿವುದು ಮೈಯಲಿ**
**ಮಿಂಚಿನ ಹೊಳೆ ತುಳುಕಾಡುವುದು**

ಇಂತಹ ಅನೇಕ ಸಂಕೀರ್ಣಗೀತೆಗಳು ಕುವೆಂಪು ಅವರ ಲೇಖನಿಯಿಂದ ಹೊರಹೊಮ್ಮಿವೆ. ಒಂದೊಂದೂ ವಸ್ತು ವಿಶೇಷತೆಯಿಂದ, ವೈವಿಧ್ಯಮಯ ರಚನೆಯ ಸ್ವರೂಪದಿಂದ ಮನಸೆಳೆಯುವಂತಿವೆ.

- **ಚಿತ್ರಾಂಗದಾ–ಖಂಡಕಾವ್ಯ**

ಚಿತ್ರಾಂಗದಾ ಒಂದು ಖಂಡಕಾವ್ಯ, ಕುವೆಂಪು ಲಕ್ಷ್ಮೀಶನ 'ಜೈಮಿನಿ ಭಾರತ' ಮತ್ತು ಠಾಗೂರರ 'ಚಿತ್ರಾ' ನಾಟಕಗಳನ್ನು ಆಧಾರವಾಗಿರಿಸಿಕೊಂಡು ನವದರ್ಶನದೊಂದಿಗೆ ಈ ಕಾವ್ಯವನ್ನು ರಚಿಸಿದ್ದಾರೆ. ಆರು ಪರ್ವಗಳಿರುವ ಈ ಖಂಡಕಾವ್ಯ ಸುಮಾರು ೨೪೯೬ ರಷ್ಟು ಪಂಕ್ತಿಗಳನ್ನೊಳಗೊಂಡಿದೆ. ಚಿತ್ರವಾಹನನ ಮಗಳು ಚಿತ್ರಾಂಗದೆ ಗಂಡಿನಂತೆಯೇ ಬೆಳೆದವಳು, ಸಂನ್ಯಾಸಿ ವೇಷದಲ್ಲಿ ಯಾತ್ರಿಕನಾಗಿದ್ದ ಅರ್ಜುನನನ್ನು ನೋಡುತ್ತಾಳೆ:

**... ಚರ್ಯೆಯೊಳ್**
**ನೃಪ ಕುಮಾರನೆ ತಾನು ಎಂಬಂತಿರ್ದಾಕೆ**
**ನಿಂದಳದೊ ಮೊತ್ತಮೊದಲಬಲತಾ ಭಾವದಿಂ**
**ಹಾ ಪೆಣ್ತನದ ನಾಣನನುಭವಿಸಿ.**

ಗಂಡು ವೇಷದ ಆಕೆಯನ್ನು ನೋಡಿ ಅರ್ಜುನ ನೀನಾರು? ಹೆದರದಿರು ನಾವು ಮುನಿಗಳಲ್ಲ ಎಂದು ನುಡಿದಾಗ ಚಿತ್ರಾಂಗದೆಯ ಸ್ವಾಭಿಮಾನ ಕೆರಳುತ್ತದೆ. ಆರಂಭದಲ್ಲಿ ವಾದ–ವಿವಾದದಲ್ಲಿದ್ದ ಮಾತು ಮೋಹದಲ್ಲಿ ಕೊನೆಗೊಳ್ಳುತ್ತದೆ. ಮುದ್ರೆಯುಂಗುರ ತೊಡಿಸಿದ ಅರ್ಜುನ ಆರು ತಿಂಗಳಲ್ಲಿ ಬಂದು ಕರೆದೊಯ್ಯುತ್ತೇನೆಂದು ಹೇಳುತ್ತಾನೆ. ಆದರೆ ಇಬ್ಬರ ಭೇಟಿಯೂ ಮತ್ತೆ ಸಾಧ್ಯವಾಗುವುದಿಲ್ಲ, ಬಬ್ರುವಾಹನ ಜನಿಸಿ ವೀರನಾಗಿ ಬೆಳೆಯುತ್ತಾನೆ. ಮುಂದೆ ಧರ್ಮರಾಯ ನಡೆಸಲು ಉದ್ದೇಶಿಸಿದ ಅಶ್ವಮೇಧದ ಕುದುರೆಯನ್ನು ಕಟ್ಟುತ್ತಾನೆ. ಅರ್ಜುನ ಬಬ್ರುವಾಹನ ಯುದ್ಧವಾಗುತ್ತದೆ. ಜೀವದ ಹಂಗು ತೊರೆದು ಯುದ್ಧ ನಿಲ್ಲಿಸಿದ ಚಿತ್ರಾಂಗದಾ ಚಿರನಿದ್ರೆಗೆ ತೆರಳುತ್ತಾಳೆ. ಕಾವ್ಯ ಪ್ರಕಾರದಲ್ಲಿ ಅಪರೂಪವಾದ 'ಮಹೋಪಮೆ' ಯನ್ನು ಕುವೆಂಪು ಇಲ್ಲಿ ಮೊದಲಬಾರಿಗೆ ಬಳಸಿದ್ದಾರೆ. ಉದಾತ್ತ ಗುಣಗಳು, ಗಂಭೀರ ನಡತೆ, ಮಹೋಪಮೆಯ ಜೊತೆ ಪ್ರಕೃತಿಯ ಸುಂದರ ವರ್ಣನೆಗಳೂ ಮಿಳಿತವಾಗಿ ಚಿತ್ರಾಂಗದಾ ಅಪರೂಪದ ಚಿಕ್ಕಚೊಕ್ಕ ಕಾವ್ಯವಾಗಿದೆ.

- **ಶ್ರೀರಾಮಾಯಣ ದರ್ಶನಂ**

ಆಧುನಿಕ ಸಾಹಿತ್ಯ ಯುಗದ ಭರಾಟೆಯಲ್ಲಿ ಮಹಾ ಕಾವ್ಯಗಳ ಯುಗವೇ ಮುಗಿದುಹೋಯಿತೋ ಏನೋ ಎನ್ನುವಂತಹ ಸಂದರ್ಭದಲ್ಲಿ ಕುವೆಂಪು ರಚಿಸಿದ 'ಶ್ರೀರಾಮಾಯಣ ದರ್ಶನಂ' ಮಹಾಕಾವ್ಯ ಅಂತಹ ಎಲ್ಲ ಮಾತುಗಳಿಗೆ ತೆರೆ ಎಳೆಯಿತಲ್ಲದೆ, ಮುಂದೆಯೂ ಅಂತಹ ಪರಂಪರೆಯೊಂದು ಜೀವಂತವಾಗಿರಲು ಅನುವು ಮಾಡಿಕೊಟ್ಟಿತು! ಗುಣ ಮತ್ತು ಗಾತ್ರ, ಎರಡರಲ್ಲೂ ಬೃಹತ್ ಆಗಿದ್ದರಿಂದಲೇ ಕನ್ನಡಕ್ಕೆ ದೇಶದ ಅತ್ಯುನ್ನತ ಸಾಹಿತ್ಯ ಪ್ರಶಸ್ತಿಯಾದ 'ಜ್ಞಾನಪೀಠ'ವನ್ನೂ ತಂದುಕೊಟ್ಟಿತು. ಮಹಾಛಂದಸ್ಸಿನಲ್ಲಿ ರಚನೆಯಾಗಿರುವ ಈ ಕಾವ್ಯ ೩೩ ಸಾವಿರಕ್ಕೂ ಹೆಚ್ಚು ಸಾಲುಗಳನ್ನು ಒಳಗೊಂಡಿದೆ. ಕುವೆಂಪು ಅವರು ಇಲ್ಲಿ ಸಾಹಿತಿಗಳಿಗೆ ವಂದಿಸಿರುವುದೇ ಅವರ ಮನೋಭೂಮಿಕೆಯ ಎತ್ತರವನ್ನು ತಿಳಿಸಿಕೊಡುತ್ತದೆ.

**'ಹೋಮರಗೆ ವರ್ಜಿಲಗೆ ಡಾಂಟೆ ಮೇಣ್ ಮಿಲ್ಟನಗೆ**
**ನಾರಣಪ್ಪಂಗೆ ಮೇಣ್ ಪಂಪನಿಗೆ ಋಷಿವ್ಯಾಸ**
**ಭಾಸ ಭವಭೂತಿ ಕಾಳಿದಾಸಾದ್ಯರಿಗೆ,**
**ನರಹರಿ ತುಳಸಿದಾಸ ಮೇಣ್ ಕೃತ್ತಿವಾಸಾದಿ**
**ನನ್ನಯ್ಯ ಫಿರ್ದೋಸಿ ಕಂಬಾರವಿಂದರಿಗೆ,**
**ಮಣಿದು ಕೈ ಜೋಡಿಸುವೆನಾಂ'**

ರಾಮಾಯಣ ದರ್ಶನಂ – ಕಥೆ – ಕಾವ್ಯ – ದರ್ಶನ ಮೂರೂ ಗುಣಗಳನ್ನು ಹೊಂದಿದೆ. ಅತಿರಮ್ಯವಾದ ಪ್ರಕೃತಿ ವರ್ಣನೆ ಮಹೋಪಮೆಗಳು, ಮನವನ್ನು ಮುಟ್ಟುವ ರೋಚಕ ಪ್ರಸಂಗಗಳೊಂದಿಗೆ ಹೊಸ ರೀತಿಯಲ್ಲಿ ರಾಮಾಯಣವನ್ನು ನೋಡುವ ದೃಷ್ಟಿಕೋನವನ್ನು ಈ ಕಾವ್ಯ ಓದುಗರಿಗೆ ನೀಡುತ್ತದೆ. ಕುವೆಂಪು ಅವರು ತಮ್ಮ ವೈಚಾರಿಕ– ವೈಜ್ಞಾನಿಕ–

ಸಾಂಸ್ಕೃತಿಕ ದರ್ಶನದ ಹೊಳಹನ್ನು ಇಡೀ ಕಾವ್ಯದುದ್ದಕ್ಕೂ ಹರಿಸಿದ್ದಾರೆ. ಕುವೆಂಪು ತಮ್ಮ ಕಾಲದ 'ಅಹಿಂಸಾ' ತತ್ವವನ್ನು–ಪುತ್ರಕಾಮೇಷ್ಟಿಯ ಸಂದರ್ಭದಲ್ಲಿಯೇ ತಂದಿದ್ದಾರೆ. ಅದನ್ನು ಜಾಬಾಲಿ ಮುನಿಯ ಮೂಲಕ ದಶರಥನಿಗೆ ಹೇಳಿಸಿದ್ದಾರೆ.

**ವಿಶ್ವಶಕ್ತಿ ಸ್ವರೂಪಿಯನಗ್ನಿಯಂ ಭಜಿಸು ನೀಂ**
**ಸಾತ್ವಿಕ ವಿಧಾನದಿಂ ಪ್ರಜೆಗಳಂ ಬಡವರಂ**
**ಸತ್ಕರಿಸವರ್ಗೆ ಬಗೆ ತಣಿಪವೋಲ್, ತೃಪ್ತಿಯಿಂ**
**'ದೊರೆಗೊಳ್ಳಿತಕ್ಕೆ' ಎಂದಾ ಮಂದಿ ಪರಸಲ್ಕೆ,**
**ಪರಕೆಯದೆ ದೇವರಾಶೀರ್ವಾದಕೆಣೆಯಾಗಿ**
**ಕೃಪಣ ವಿಧಿಯಾ ಪಿಂಡಿ ತಂದೀವುದೈ ನಿನಗೆ**
**ನೆಲದರಿಕೆಯೊಳಕ್ಕಳಂ ಜನಮನದ ಶಕ್ತಿ**
**ಮೇಣವರಭೀಪ್ಸೆಯೆ, ಮಹಾತ್ಮರಂ ನಮ್ಮಿಳೆಗೆ**
**ತಪ್ಪದೆಳೆತರ್ಪುದು ಕಣಾ !**

ಇಂತಹುದೇ ಇನ್ನೊಂದು ಪ್ರಸಂಗ ಲಂಕಾದಹನದ್ದು. ಕುವೆಂಪು ಸ್ವರ್ಣಲಂಕೆ ದಹನವಾಗುವುದನ್ನು ಅಲ್ಲಿಯ ಸಂಸ್ಕೃತಿ ನಶಿಸುವುದನ್ನು ಆಶಿಸದೆ ಅದಕ್ಕೆ ಹೊಸ ರೂಪವನ್ನೇ ಕೊಟ್ಟಿದ್ದಾರೆ. ಆ ಬದಲಾವಣೆಯನ್ನು ಲಂಕಾಲಕ್ಷ್ಮಿಯ ಕೈಯಿಂದಲೇ ಹೇಳಿಸಿದ್ದಾರೆ! ಆಂಜನೆಯನನ್ನು ನೋಡಿದ ಲಂಕಾಲಕ್ಷ್ಮಿ ಆತನನ್ನು ಪ್ರಾರ್ಥನೆ ಮಾಡಿಕೊಳ್ಳುತ್ತಾಳೆ:

**ನೀ ಸಮರ್ಥನೆ ವಲಂ, ಮುನಿದರೀ ಲಂಕೆಯಂ**
**ಸುಟ್ಟುರುಹಿ ಕಡಲೊಳಳ್ದುವ ಬಲ್ಮೆ ನಿನ್ನೊಳಿಹುದಯ್**
**ಬೇಡಿದಪೆನದರಿಂದೆ; ತಾನೆನಿತು ಕೆರಳುವ ಕತಂ**
**ನಿನಗೊದಗಿದೊಡಮೆನಗೆ ಕೇಡೆಸಗದಿರ್, ಪೂಜ್ಯ,**
**ಕಲೆಯ ಬಲೆ, ಚೆಲ್ವು ನೆಲೆ ಈ ಲಂಕೆ;**

ಇಲ್ಲಿನ ಪಾತ್ರಗಳು ಕೂಡಾ ಮಾನವೀಯತೆಯನ್ನು ಮೈಗೂಡಿಸಿ ಕೊಂಡಿರುವಂತಿವೆ. ರಾವಣನ ರಾಕ್ಷಸತ್ವವೂ ಕೂಡಾ ಮಾಗಿ, ತನ್ನ ಅಂತರಂಗವನ್ನು ಪರೀಕ್ಷಿಸಿಕೊಂಡು ಉಜ್ವಲರೂಪಿಯಾಗುತ್ತದೆ. 'ದಶಾನನ ಸ್ವಪ್ನಸಿದ್ಧಿ' ಇದಕ್ಕೆ ಉತ್ತಮ ನಿದರ್ಶನ. ಸೀತೆಯಲ್ಲಿ ಅವನಾಗಲೇ ಮಾತೃ ಪ್ರೀತಿಯನ್ನು ಕಂಡಿರುತ್ತಾನೆ. ಮಂಡೋದರಿಯು ರಾವಣನಿಗೆ ಅವನ ಸ್ವಪ್ನವನ್ನು ಕುರಿತು 'ಸೀತೆಯೊಳ್ ನಿನಗೀಗಳಿರ್ಪೊಂದು ಸಾತ್ವಿಕದ ಭಾವಶುದ್ಧಿಯೆ ದಿಟಂ ಪ್ರತಿಮೆಯಂ ಪಡೆದುದೌ ಸ್ವಪ್ನದೊಳ್ ಎಂದಾಗ ರಾವಣ ಅದನ್ನು ತಿರಸ್ಕರಿಸುವುದಿಲ್ಲ, ತನ್ನ ಆತ್ಮ ಉದ್ದಾರವಾಗಿದ್ದನ್ನು ಅರಿತ ಆತ ಮುಕ್ತವಾಗಿ ತನ್ನ ಭಾವನೆಯನ್ನು ವ್ಯಕ್ತಪಡಿಸುತ್ತಾನೆ.

**ನಿನಗಿಂ ಮಿಗಿಲ್ ಸೀತೆ**
**ನನಗೆ ದೇವತೆ, ಮಾತೆ! ಶ್ರದ್ಧೆಗೆಟ್ಟಿರ್ದೆನಗೆ**
**ಶ್ರದ್ಧೆಯಂ ಮರುಕಳಿಸುತಾತ್ಮದುದ್ಧಾರಮಂ**
**ತಂದ ದೇವತೆ, ಪುಣ್ಯ ಮಾತೆ**

ಊರ್ಮಿಳೆಯ ವ್ಯಕ್ತಿತ್ವನ್ನು ಕವಿ ಅತ್ಯಂತ ಹೃದಯಸ್ಪರ್ಶಿಯಾಗುವ ರೀತಿಯಲ್ಲಿಯೇ ರಚಿಸಿದ್ದಾರೆ. ಸೀತೆಯ ತಪಸ್ಸಿಗಿಂತಲೂ ಊರ್ಮಿಳೆಯ ತ್ಯಾಗ–ತಾಳ್ಮೆ–ಮೌನಗಳನ್ನು ಹೆಚ್ಚೆಂದು ಭಾವಿಸಿದ್ದಾರೆ. ಸಂಜೀವಿನಿಯಿಂದ ಎಚ್ಚೆತ್ತ ಲಕ್ಷ್ಮಣ ಆಡುವ ಮಾತುಗಳು ಇದಕ್ಕೆ ಸಾಕ್ಷಿಯಾಗಿದೆ;

**...... ಕಂಡೆನಾಂ, ದಿಟಂ,**
**ವಲ್ಕಲವನುಟ್ಟಿರ್ದಳಂ ನನ್ನ ಸತಿಯಂ,**
**ತಪಶ್ಚರ್ಯೆಯಿಂ ಪೂಜ್ಯೆಯಾಗಿರ್ದಳಂ! ತನ್ನ**
**ದಿವ್ಯ ಶಕ್ತಿಯೊಳೆನ್ನ ಹೃದಯಕಮೃತವನೆರೆದು,**
**ಮೇಘನಾದಾಭಿಚಾರಕ ಯಾಗಕೆನ್ನಾಯು**
**ತವಿಯದಂದದಿ ತೊಡಿಸಿದಳ್ ತಪಃ ಕವಚಮಂ**

ಸೀತೆಯ ಅಗ್ನಿಪರೀಕ್ಷೆಯ ಸಂದರ್ಭದಲ್ಲಿ ಕಂಡುಬರುವ ಅಪೂರ್ವ ನಿಲುವು, ಅವಳ ವ್ಯಕ್ತಿತ್ವದ ಮೇರುತನಕ್ಕೆ ಸಾಕ್ಷೀಭೂತವಾಗಿರುವಂತಹುದಾಗಿದೆ. ಸೀತೆ ಚಿತೆಯನ್ನು ಪ್ರವೇಶಿಸುತ್ತಾಳೆ ಆಗ:

**ಚಲಿಸಿದನು ಚಿತೆಗೆ, ನೋಳ್ಪರಾ**
**ವಿಸ್ಮಯಂ ಚಿಂತೆಗೆ ತಿರುಗುವಂತೆ: ಓವೋವೋ**
**ಗೋಪುರೋಪಮದಗ್ನಿ ಮಧ್ಯೆ ಮರೆಯಾದನೈ**
**ಜಮದಗ್ನಿಜಾತನಂ ಜಯಿಸಿದಾತಂ! ....**
**ಹದಿಬದೆಯ ನಗ್ನಿವುಗಿಸುವುದಿರಲಿ,**
**ತನ್ನಂ ಪರೀಕ್ಷಿಸುವರಾರೋ? ತಾನೇಂ ಪೊರತೂ**
**ದುರಿತ ದೋಷಕ್ಕೆ?**

ಸೀತೆಯನ್ನೇನೋ ಪರೀಕ್ಷಿಸಹುದು, ಆದರೆ ತನ್ನನ್ನಾರು ಪರೀಕ್ಷಿಸುವವರು? ಎಂದು ತನ್ನನ್ನು ತಾನೇ ಅಗ್ನಿಗರ್ಪಿಸಿಕೊಂಡ ರಾಮ–ಇಂತಹ ಔಚಿತ್ಯಪೂರ್ಣ ಸಂದರ್ಭವನ್ನು ಸೃಷ್ಟಿಸಿದಂತಹ ಕವಿ ಇಬ್ಬರೂ ಧನ್ಯರೇ–ಮಾನ್ಯರೆ– ಚಿರಸ್ಮರಣೀಯರೇ ಸರಿ.

- **ನಾಟಕಗಳು**

ಕುವೆಂಪು ಅವರು ೧೪ ನಾಟಕಗಳನ್ನು ರಚಿಸಿದ್ದಾರೆ. ಅವರು ತಮ್ಮ ನಾಟಕಗಳಿಗೆ ಆಯ್ಕೆ ಮಾಡಿಕೊಂಡಿರುವ ವಸ್ತು ರಾಮಾಯಣ, ಮಹಾಭಾರತ, ಪುರಾಣ, ಇತಿಹಾಸ ಮತ್ತು ಸಾಮಾಜಿಕ ವಿಷಯಗಳನ್ನು ಒಳಗೊಂಡಿದೆ. ನಾಟಕ ಸಾಹಿತ್ಯ ಜನಪ್ರಿಯವಾಗುತ್ತಿದ್ದ ಹೊತ್ತಿನಲ್ಲಿ ಕುವೆಂಪು ರಚಿಸಿದ ಶೂದ್ರತಪಸ್ವಿ, ವಾಲ್ಮೀಕಿಯ ಭಾಗ್ಯ, ಶ್ಮಶಾನ ಕುರುಕ್ಷೇತ್ರ, ಬೆರಳ್‌ಗೆ ಕೊರಳ್, ಯಮನ ಸೋಲು, ಚಂದ್ರಹಾಸ, ಮಹಾರಾತ್ರಿ, ರಕ್ತಾಕ್ಷಿ, ಬಿರುಗಾಳಿ, ಜಲಗಾರ, ಬಲಿದಾನ, ಮೋಡಣ್ಣನ ತಮ್ಮ, ನನ್ನಗೋಪಾಲ ನಾಟಕಗಳು ಅತ್ಯಂತ ಗಮನಾರ್ಹವಾಗಿವೆ.

- **ಕಥಾಸಂಕಲನಗಳು**

ಕುವೆಂಪು ಎರಡು ಕಥಾ ಸಂಕಲನಗಳನ್ನು ಪ್ರಕಟಿಸಿದ್ದಾರೆ. ಒಂದು 'ಸಂನ್ಯಾಸಿ ಮತ್ತು ಇತರ ಕಥೆಗಳು' ಮತ್ತೊಂದು 'ನನ್ನದೇವರು ಮತ್ತು ಇತರ ಕಥೆಗಳು' ಒಂದರಲ್ಲಿ ೯ ಮತ್ತೊಂದರಲ್ಲಿ ೮ ಕಥೆಗಳಿವೆ. ಸಮಾಜದ ಸಮಸ್ಯೆಗಳು, ತ್ಯಾಗ, ಜೀವನದ ಹಲವು ರೀತಿಯ ಅನುಭವಗಳು, ಬಲಿದಾನ, ವೈಚಾರಿಕತೆ ಎಲ್ಲವೂ ಇದೆ. ಕೆಲವು ಕಥೆಗಳು ಅತ್ಯಂತ ಸೃಜನಶೀಲವಾಗಿದ್ದು ಗಮನಿಸಲೇಬೇಕಾದವಾಗಿವೆ. ಸಂಖ್ಯೆ ಕಡಿಮೆಯಿದ್ದರೂ ಉತ್ತಮ ಗುಣಮಟ್ಟದ ಕಥೆಗಳನ್ನು ಕುವೆಂಪು ಸಾಹಿತ್ಯಲೋಕಕ್ಕೆ ನೀಡಿದ್ದಾರೆ. 'ಯಾರೂ ಅರಿಯದ ವೀರನಲ್ಲಿ ಆಳು ಲಿಂಗ ಗೌಡರ ಮನೆಯವರೆಲ್ಲರನ್ನು ರಕ್ಷಿಸುವುದಕ್ಕಾಗಿ, ತಾನೇ ನದಿಗೆ ಹಾರಿ ಎಲ್ಲರ ಪ್ರಾಣ ಉಳಿಸುತ್ತಾನೆ. ಅನಂತರ ಈಜಿ ಬದುಕಿ ಬಂದು ಗೌಡರ ಪ್ರಶಂಸೆಗೆ ಪಾತ್ರನಾಗುತ್ತಾನೆ. 'ದೆವ್ವದ ಕಾಟ'ದಲ್ಲಿ ಒಡೆಯರಾದ ರಾಯರನ್ನು ಆ ಊರಿನಿಂದಲೇ ಹೊರ ಹೋಗುವಂತೆ ಮಾಡುವುದಕ್ಕೆ, ಆಳು

ಮುತ್ತಣ್ಣನೇ ಮನೆಯ ಮೇಲೆ ಕಲ್ಲು ತೂರಿ ದೆವ್ವದ ಭ್ರಮೆಯನ್ನು ಸೃಷ್ಟಿಸಿ ಕೊನೆಯಲ್ಲಿ ಸಿಕ್ಕುಬೀಳುತ್ತಾನೆ. 'ಮೀನಾಕ್ಷಿಯ ಮನೆ ಮೇಷ್ಟರು' ಕಥೆಯಲ್ಲಿ ಬಡವನಾದ ಅಧ್ಯಾಪಕ ಶಿಷ್ಯೆಯಲ್ಲೇ ತನ್ನ ಹಿಡಿದಿಟ್ಟ ಭಾವಗಳನ್ನು ಕಂಡು, ಕೊನೆಗೆ ಅವಳಿಂದ ಆಶಾಭಂಗವಾದರೂ, ಆಕೆಯ ವರನಲ್ಲಿದ್ದ ಸಜ್ಜನಿಕೆಯಿಂದ ಬದಲಾಗುತ್ತಾನೆ. ಇವು ಕೇವಲ ಉದಾಹರಣೆಗಳಷ್ಟೇ, ಕುವೆಂಪು ಅವರ ಎಲ್ಲ ಕಥೆಗಳೂ ಅರ್ಥಪೂರ್ಣವಾಗಿದ್ದು ಇಂದಿಗೂ ಅದರ ಪ್ರಸ್ತುತತೆಯನ್ನು ಕಾಯ್ದುಕೊಂಡು ಬಂದಿವೆ.

- **ಕಾದಂಬರಿ**

ಕುವೆಂಪು ಕನ್ನಡ ಸಾರಸ್ವತ ಲೋಕಕ್ಕೆ, ಅದರಲ್ಲೂ ಕಾದಂಬರಿ ಕ್ಷೇತ್ರಕ್ಕೆ ನೀಡಿರುವ ಎರಡು ಮಹತ್ತರವಾದ ಕೊಡುಗೆಯೆಂದರೆ, ಕಾನೂರು ಸುಬ್ಬಮ್ಮ ಹೆಗ್ಗಡತಿ ಮತ್ತು ಮಲೆಗಳಲ್ಲಿ ಮದುಮಗಳು. ಮಲೆನಾಡಿನ ಪ್ರಕೃತಿ–ಜನಜೀವನದ ಪೂರ್ಣ ಚಿತ್ರಣ ಈ ಕಾದಂಬರಿಗಳ ಓದಿನಿಂದ ಪೂರ್ಣವಾಗಿಯೇ ಸಿದ್ಧಿಸುತ್ತದೆ.

- **ಕಾನೂರು ಹೆಗ್ಗಡತಿ**

ಈ ಕಾದಂಬರಿ ಮೊದಲ ಮುದ್ರಣದಲ್ಲಿ 'ಕಾನೂರು ಸುಬ್ಬಮ್ಮ ಹೆಗ್ಗಡತಿ ಎಂಬ ಶೀರ್ಷಿಕೆಯಲ್ಲಿ ಪ್ರಕಟವಾಗಿತ್ತು, ೧೯೩೬ರಲ್ಲಿ ಪ್ರಕಟವಾದ ಈ ಕಾದಂಬರಿಯಲ್ಲಿ ೨ ತಲೆಮಾರುಗಳ ಜೀವನವನ್ನು ಚಿತ್ರಿಸಿದೆ. ಚಂದ್ರಯ್ಯಗೌಡ, ಸಿಂಗಪ್ಪಗೌಡ, ಶ್ಯಾಮಯ್ಯಗೌಡ, ಅಣ್ಣಯ್ಯಗೌಡ, ವೆಂಕಪ್ಪಯ್ಯ, ಸೇರೆಗಾರ, ಗೌರಮ್ಮ ನಾಗಮ್ಮ ಮೊದಲಾದವರು ಮೊದಲನೆಯ ತಲೆಮಾರಿಗೆ ಸೇರಿದ್ದರೆ, ಹೂವಯ್ಯ, ರಾಮಯ್ಯ, ಕೃಷ್ಣಪ್ಪ, ಚಿನ್ನಯ್ಯ, ಪುಟ್ಟಣ್ಣ, ಸುಬ್ಬಮ್ಮ ಸೀತೆ ಮೊದಲಾದವರು ಎರಡನೆಯ ತಲೆಮಾರಿಗೆ ಸೇರಿದವರಾಗಿದ್ದಾರೆ. ಚಂದ್ರಯ್ಯಗೌಡರು ಅತ್ಯಾಧಿಕ ಆಸೆಯಿಂದ ನಾಲ್ಕನೆಯ ಹೆಂಡತಿಯಾಗಿ ಸುಬ್ಬಮ್ಮನನ್ನು ಮದುವೆಯಾಗುತ್ತಾರೆ. ಅವರ ಸಾವಿನ ಅನಂತರ ಗರ್ಭಿಣಿಯಾದ ಸುಬ್ಬಮ್ಮ ಹೆಗ್ಗಡತಿ ಅದರಿಂದ ಪಾರಾಗುವ ಪ್ರಯತ್ನದಲ್ಲಿ ಸಾವನ್ನಪ್ಪುತ್ತಾಳೆ. ರಾಮಯ್ಯ ಅಫೀಮಿನ ಹವ್ಯಾಸಕ್ಕೆ, ಕೃಷ್ಣಪ್ಪ ಬೇಟೆಯ ಹವ್ಯಾಸಕ್ಕೆ ಸಿಕ್ಕಿ ಬಲಿಯಾಗುತ್ತಾರೆ. ಹೂವಯ್ಯ ಆಧ್ಯಾತ್ಮಿಕವಾಗಿ ಬೆಳೆದರೂ ಲೌಕಿಕದ ರೀತಿಯಲ್ಲಿ ಯಾವುದನ್ನೂ ಪಡೆಯುವುದಿಲ್ಲ. ಸೀತೆ ತನಗೆ ಬೇಡದವನೊಡನೆ ಮದುವೆಯಾಗಿ, ಹುಚ್ಚಿಯ ಪಟ್ಟವನ್ನು ಪಡೆದರೂ ಉನ್ನತ ಬಾಳಿಗೆ ಸಹಕಾರಿಯಾಗಿ ನಿಲ್ಲುತ್ತಾಳೆ. ಅತ್ಯಂತ ಸಾಮಾನ್ಯವಾದ ಆಲೋಚನೆಯಿದ್ದ ಪುಟ್ಟಮ್ಮ ಚಿನ್ನಯ್ಯರದ್ದೇ ನೆಮ್ಮದಿ–ಶಾಂತಿ ಕಂಡ ಬದುಕಾಗುತ್ತದೆ. ಇಲ್ಲಿ ಉಳಿದ ಸೇವಕ ವರ್ಗದ ಪಾತ್ರವಲ್ಲದೆ, ನಾಯಿಗಳಾದ ಟೈಗರ್, ರೋಜಿ, ಕೊತ್ವಾಲ, ಎತ್ತುಗಳಾದ ನಂದಿ, ಲಚ್ಚ, ಕಾಲಿ ಹಸು, ಬಲೀಂದ್ರನಂತಹ ಸಾಕು ಪ್ರಾಣಿಗಳೂ ಪಾತ್ರವೇ ಎನ್ನುವ ಮಟ್ಟಿಗೆ ಚಿತ್ರಣಗೊಂಡಿವೆ. ಮಲೆನಾಡಿನ ಜನರ ಮದ್ಯ–ಮಾಂಸಗಳ ಚಟ, ದೆಯ್ಯ–ಭೂತದ ನಂಬಿಕೆಗಳು ಪ್ರಕೃತಿಯ ರುದ್ರ ರಮಣೀಯತೆಯಿಂದ ಜನರ ಮನಸ್ಸಿನಲ್ಲಿ ಈ ಕಾದಂಬರಿ ಅಚ್ಚಳಿಯದಂತೆ ನಿಂತಿದೆ.

- **ಮಲೆಗಳಲ್ಲಿ ಮದುಮಗಳು**

ಮಲೆನಾಡಿನ ಬದುಕನ್ನು ಯಥಾವತ್ತಾಗಿ ಕಟ್ಟಿಕೊಡುವ ಕಾದಂಬರಿಯಿದು. ಇಲ್ಲಿ ಮುಖ್ಯ ವಿಷಯ ಪ್ರೇಮ, ಗುತ್ತಿ ತಾನು ಇಷ್ಟಪಟ್ಟ ಹೆಣ್ಣು ತಿಮ್ಮಿಯೊಂದಿಗೆ ಊರನ್ನು ಬಿಡುವುದು, ಮುಕುಂದಯ್ಯ ಚಿನ್ನಮ್ಮ ಮದುವೆಯ ದಿನವೇ ಅಲ್ಲಿಂದ ಒಂದಾಗಲು ಹೊರಟುಹೋಗುವುದು, ಚಿನ್ನಮ್ಮನ ತಂದೆ ವೆಂಕಟಪ್ಪನ ಸಾವಿನಿಂದ ಇಬ್ಬರೂ ಮನೆಗೆ ಬರುತ್ತಾರೆ, ಐತ ಪಿಂಚಲು ಇಬ್ಬರ ಪ್ರಣಯ ಕಾದಂಬರಿಯುದ್ದಕ್ಕೂ ಹರಿಯುತ್ತದೆ, ಇದಲ್ಲದೆ ಅಕ್ಕಣಿ–ಪೀಂಚಲು, ಕಾವೇರಿ–ದೇವಯ್ಯ, ರಂಗಪ್ಪಗೌಡ ಅಕ್ಕಣಿಯಂತಹ ಜೋಡಿಗಳ ಏಳು–ಬೀಳಿನ ಬದುಕಿನ ಚಿತ್ರಣವೂ ಇಲ್ಲಿ ಬರುತ್ತದೆ. ಕುವೆಂಪು ಅವರ ಇತರ ಕೃತಿಗಳಿಗಿಂತ ವಿಭಿನ್ನವಾಗಿ, ಮತಾಂತರದ ಸೂಕ್ಷ್ಮ ಚಿತ್ರಣದೊಂದಿಗೆ ವಿಶಿಷ್ಟವಾದ ಛಾಪನ್ನು ತನ್ನದೇ ಆದ ರೀತಿಯಲ್ಲಿ ಮಲೆಗಳಲ್ಲಿ ಮದುಮಗಳು ಕಾದಂಬರಿ ಮೂಡಿಸಿದೆ.

- **"ಮಲೆನಾಡಿನ ಚಿತ್ರಗಳು"**

ಕುವೆಂಪು ಅವರು ಮಲೆನಾಡಿನ ಅಪೂರ್ವವಾದ ಅನುಭವಗಳನ್ನು ಶಬ್ದಚಿತ್ರದಂತೆ ಕಟ್ಟಿಕೊಟ್ಟವರು, ಅಪೂರ್ವವಾಗಿರುವ ಜೀವನ ಸಹಜ ಸರಳತೆಯನ್ನು ಒಳಗೊಂಡಿರುವ ಹನ್ನೆರಡು ಚಿತ್ರಣಗಳನ್ನು ಕವಿ ಇಲ್ಲಿ ನೀಡಿದ್ದಾರೆ.

- **ನೆನಪಿನ ದೋಣಿಯಲ್ಲಿ**

ಕುವೆಂಪು ಅವರ ಆತ್ಮಕಥೆ ಇದು. ದಿನಚರಿಯ ರೂಪದಲ್ಲಿ ಇರುವ ಈ ಕೃತಿಯಲ್ಲಿ, ಅವರು ಹುಟ್ಟಿದಂತಹ ಸಂದರ್ಭ, ಬಾಲ್ಯ, ವಿದ್ಯಾಭ್ಯಾಸ, ಕುಟುಂಬದಲ್ಲಿನ ಕಷ್ಟಗಳು–ಏಳು ಬೀಳುಗಳು, ಉದ್ಯೋಗದ ಹಲವಾರು ಸವಾಲುಗಳು, ವೈವಾಹಿಕ ಜೀವನದ ವಿವರಗಳೆಲ್ಲವನ್ನೂ ನೀಡಿದ್ದಾರೆ. ಬಹಳ ವಿಶೇಷವೆಂದರೆ ಅವರ ಕೃತಿ–ಕವನ–ಕಾವ್ಯ ರಚನೆಗೆ ಪ್ರೇರಣೆಯಾದ ಸಂದರ್ಭಗಳನ್ನೂ ಇಲ್ಲಿ ನೆನೆದಿದ್ದಾರೆ. ಕುವೆಂಪು ವ್ಯಕ್ತಿತ್ವವನ್ನು ಅರ್ಥಮಾಡಿಕೊಳ್ಳಲು ನೆನಪಿನ ದೋಣಿ ಪೂರಕವಾಗಿದೆ.

- **ಜೀವನ ಚರಿತ್ರೆಗಳು**

ಕುವೆಂಪು ಅವರು ಶ್ರೀರಾಮಕೃಷ್ಣ ಆಶ್ರಮದ ಸಂಸರ್ಗದಲ್ಲಿ ಹೆಚ್ಚು ಕಾಲ ಕಳೆದವರು. ಈ ಹಿನ್ನೆಲೆಯಿಂದಲೇ ಅವರು ಶ್ರೀರಾಮಕೃಷ್ಣ ಪರಮಹಂಸ ಮತ್ತು ಸ್ವಾಮಿ ವಿವೇಕಾನಂದ ಎನ್ನುವ ಹೆಸರಿನಲ್ಲಿ ಎರಡು ಜೀವನಚರಿತ್ರೆಗಳನ್ನು ಬರೆದಿದ್ದಾರೆ. ಆಶ್ರಮದಲ್ಲಿ ವಾಸವಿದ್ದ ಅವಧಿಯಲ್ಲಿ ಆದ ಆಧ್ಯಾತ್ಮಿಕ ಅನುಭವಗಳು ಮತ್ತು ಇಂಗ್ಲಿಷ್, ಬಂಗಾಳಿ ಆಕರ ಗ್ರಂಥಗಳ ನೆರವಿನಿಂದ ರಚಿಸಿರುವ ಈ ಎರಡೂ ಜೀವನ ಚರಿತ್ರೆಗಳು ವಸ್ತುನಿಷ್ಠತೆಯನ್ನು ಕಾಯ್ದುಕೊಂಡು ಗುಣದಲ್ಲಿಯೂ ಕೂಡಾ ಉನ್ನತಿಯನ್ನು ಪಡೆದಿದೆ.

- **ಕಾವ್ಯ ಮೀಮಾಂಸೆ – ಅನ್ವಯಿಕ ವಿಮರ್ಶೆ – ವೈಚಾರಿಕ ಬರೆಹಗಳು**

ಕುವೆಂಪು ಕಾವ್ಯ ರಚನೆಯಲ್ಲಿ ಎಷ್ಟು ಗಂಭೀರವಾಗಿ ತಮ್ಮನ್ನು ತಾವು ತೊಡಗಿಸಿಕೊಂಡಿದ್ದರೋ, ಅಷ್ಟೇ ಗಂಭೀರವಾಗಿ ವಿಮರ್ಶೆ ವೈಚಾರಿಕತೆಯನ್ನು ಮೈಗೂಡಿಸಿಕೊಂಡಿದ್ದರು. ಕಾವ್ಯ ಮೀಮಾಂಸೆಯಲ್ಲಿ ಕುವೆಂಪು ಐತಿಹಾಸಿಕವಾಗಿ, ಸಾಮಾಜಿಕವಾಗಿ, ಸೂಕ್ಷ್ಮವಾಗಿ ಮತ್ತು ತಮ್ಮ ದಾರ್ಶನಿಕ ತತ್ವದ ಸಿದ್ಧಾಂತಗಳನ್ನೇ ಪ್ರತಿಪಾದಿಸುತ್ತಿದ್ದರು. ಅವರ ಕಾವ್ಯಮೀಮಾಂಸೆಯ ಕೃತಿಗಳಾದ 'ಪ್ರತಿಮಾಪ್ರತಿಕೃತಿ, ಕಾವ್ಯ ವಿಮರ್ಶೆಯಲ್ಲಿ ಪೂರ್ಣದೃಷ್ಟಿ, ರಸಾನುಭವದ ಅಲೌಕಿಕತೆ, ರಸೋವೈಸಃ' ಮುಂತಾದ ಲೇಖನಗಳು ಓದುಗರಿಗೆ ಅವರು ಇರಿಸಿಕೊಳ್ಳಬೇಕಾಗಿರುವ ಧ್ಯೇಯ ಮತ್ತು ಆದರ್ಶಗಳನ್ನು, ಹೊಸ ದೃಷ್ಟಿಕೋನಗಳನ್ನು ಒದಗಿಸಿಕೊಡುತ್ತವೆ. ವೈಚಾರಿಕ ಬರಹಗಳು ಕೂಡಾ ವಿಶ್ಲೇಷಣೆ, ಮೌಢ್ಯವಿಲ್ಲದ ಮೌಲ್ಯಗಳು, ನೈತಿಕ ಸ್ಥೈರ್ಯ, ರಾಷ್ಟ್ರೀಯತೆ ಎಲ್ಲವನ್ನೂ ಒಳಗೊಂಡಿವೆ.

ನೀವೀಗಾಗಲೇ ನೋಡಿದಂತೆ ಕುವೆಂಪು ಅವರ ಸಾಧನೆ ಅತ್ಯಂತ ಹಿರಿದಾಗಿರುವಂತಹುದು. ಅವರ ರಚನೆಯ ಒಂದು ಪ್ರಕಾರವನ್ನೇ ಅಭ್ಯಾಸ ಮಾಡಲು ಸಾಕಷ್ಟು ಕಾಲಾವಕಾಶಬೇಕು. ನಿಮಗೆ ಅವರ ಕೃತಿಗಳನ್ನು ಪರಿಚಯ ಮಾಡಿಸಿರುವ ಉದ್ದೇಶವೇ ನೀವು ಹೆಚ್ಚಿನ ಓದಿನಲ್ಲಿ ತೊಡಗಿಕೊಳ್ಳಲಿ ಎನ್ನುವ ಆಶಯದಿಂದ, ಕುವೆಂಪು ಅವರ ಬಗೆಗಿನ ಸಂಗ್ರಹವಾದ ಪರಿಚಯವನ್ನು ನೀವಿಲ್ಲಿ ಮಾಡಿಕೊಳ್ಳಬಲ್ಲಿರಿ.

## ೧.೬ ಸ್ವ ಪರೀಕ್ಷಾ ಪ್ರಶ್ನೆಗಳು

೧. ಕುವೆಂಪು ಎಂದು ಜನ್ಮ ತಾಳಿದರು? ಅವರ ತಂದೆ ತಾಯಿ ಯಾರು?

೨. ಕುವೆಂಪು ಅವರ ಮೇಲೆ ಪ್ರಭಾವ ಬೀರಿರುವ ಕೆಲವು ಕೃತಿಗಳನ್ನು ಹೆಸರಿಸಿ.

೩. ಕುವೆಂಪು ಅವರ ಮೇಲೆ ಇಂಗ್ಲಿಷ್ ಸಾಹಿತ್ಯದ ಪ್ರಭಾವವೇನು?

೪. ಚೈತನ್ಯ ಕೇಂದ್ರಗಳು ಯಾವುವು?

೫. ಕುವೆಂಪು ಯಾವುದು ತಾವು ಸಾಧಿಸಬಲ್ಲ ಅತ್ಯಮೂಲ್ಯ ಕೆಲಸವೆಂದುಕೊಂಡಿದ್ದರು?